# 2014-15 ನೇ ಸಾಲಿನ ಮಧುವನ ಮತ್ತು ಜೇನು ಸಾಕಣೆ ಅಭಿವೃದ್ಧಿ ಯೋಜನೆ ಅನುಷ್ಠಾನದ ಮಾರ್ಗಸೂಚಿಗಳು:-

**I.ಯೋಜನೆಯ ಹೆಸರು: ಮಧುವನ ಮತ್ತು ಜೇನು ಸಾಕಣೆ ಅಭಿವೃದ್ಧಿ ಯೋಜನೆ**

**ರಾಜ್ಯವಲಯ (ಎಸ್-21)**

**ಲೆಕ್ಕ ಶೀರ್ಷಿಕೆ: 2851-00-200-0-01 (ಯೋಜನೆ)**

## II. ಯೋಜನೆಯ ಸಂಕ್ಷಿಪ್ತ ಪರಿಚಯ ಮತ್ತು ಮುಖ್ಯಾಂಶಗಳು:

ಜೇನುಗಾರಿಕೆಯು ಕೃಷಿ/ ತೋಟಗಾರಿಕೆ/ ಅರಣ್ಯ ಆಧಾರಿತವಾಗಿದ್ದು, ರೈತ ಸಮುದಾಯಕ್ಕೆ ಪೂರಕ ಆದಾಯ ತರುವಂತಹ ಉಪ ಉದ್ಯೋಗ ಹಾಗೂ ಲಾಭದಾಯಕ ಕೃಷಿ ಆಧಾರಿತ ಚಟುವಟಿಕೆಯಾಗಿದೆ. ಇದಕ್ಕೆ ಒಂದು ಬಾರಿ ಬಂಡವಾಳ ಹೂಡಿದರೆ ಸಾಕು, ಅದು ಜೇನು ತುಪ್ಪ ಹಾಗೂ ಇತರೆ ಉಪ ಉತ್ಪನ್ನಗಳನ್ನು ನೀಡುವುದೇ ಅಲ್ಲದೆ, ಪರಾಗಸ್ಪರ್ಶದ ಮೂಲಕ ತೋಟಗಾರಿಕೆ, ಕೃಷಿ ಹಾಗೂ ಅರಣ್ಯ ಉತ್ಪನ್ನಗಳ ಗುಣಮಟ್ಟ ಹಾಗೂ ಪ್ರಮಾಣವನ್ನು ಹೆಚ್ಚಿಸುತ್ತದೆ. ಜೇನುಗಾರಿಕೆಯನ್ನು ರೈತರು, ಭೂರಹಿತ ಸಣ್ಣ, ಅತಿ ಸಣ್ಣ ರೈತ ಕಾರ್ಮಿಕರು, ಮಹಿಳೆಯರು, ಅಂಗವಿಕಲರು ಕೈಗೊಳ್ಳಬಹುದಾಗಿದೆ. ಜೇನುಗಾರಿಕೆಯಿಂದ ವಿಫುಲ ರಫ್ತಿಗೆ ಅವಕಾಶವಿದ್ದು, ಜೇನುತುಪ್ಪವು ಮಾನವನಿಗೆ ನಿಸರ್ಗವಿತ್ತ ಕೊಡುಗೆಯಾಗಿದ್ದು, ಅಪಾರ ಔಷದೀಯ ಗುಣಗಳನ್ನು ಹೊಂದಿದೆ. ಜೇನುಗಾರಿಕೆಯನ್ನು ಹೂ, ತರಕಾರಿ, ಹಣ್ಣು, ಕಾಫಿ, ಕೃಷಿ ಬೆಳೆಗಳಲ್ಲಿ ಹಾಗೂ ಗುಡ್ಡಗಾಡು ಮತ್ತು ಮನೆಯಂಗಳದ ಪ್ರದೇಶಗಳಲ್ಲಿಯೂ ಸಹಾ ಪ್ರಾರಂಭಿಸಬಹುದಾಗಿರುತ್ತದೆ.

ಕರ್ನಾಟಕ ರಾಜ್ಯದಲ್ಲಿ ಜೇನುಗಾರಿಕೆ ಸಮಗ್ರ ರೀತಿಯಲ್ಲಿ ಅಭಿವೃದ್ಧಿಗೊಳಿಸುವ ವಿಫುಲ ಅವಕಾಶಗಳಿದ್ದು, ಲಭ್ಯವಿರುವ ಸಸ್ಯ ಸಂಪತ್ತು, ತಾಂತ್ರಿಕ ಮತ್ತು ಸಂಶೋಧನಾ ಸಂಪನ್ಮೂಲಗಳನ್ನು ಆಧರಿಸಿ ತೋಟಗಾರಿಕೆ ಮತ್ತು ಕೃಷಿ ಬೆಳೆಗಳಲ್ಲಿ ಉತ್ಪಾದನೆಯ ಹೆಚ್ಚಳ, ಉತ್ಪಾದಕತೆಯ ಸುಧಾರಣೆ ಹಾಗೂ ಗುಣ ಮಟ್ಟವನ್ನು ಸುಧಾರಿಸುವಂತಹ ಕಾರ್ಯಕ್ರಮಗಳನ್ನು ಪರಿಣಾಮಕಾರಿಯಾಗಿ ರೂಪಿಸಿ ಅನುಷ್ಠಾನಗೊಳಿಸಲಾಗುವುದು. ಇಲಾಖೆಯ ಹಾಗೂ ಸರ್ಕಾರದ ಇತರೆ ಯೋಜನೆಗಳ ಕಾರ್ಯಕ್ರಮಗಳನ್ನು ಮತ್ತು ಲಭ್ಯವಿರುವ ಅನುಧಾನವನ್ನು ಕ್ರೋಢೀಕರಿಸಿ ವಿವಿಧ ಜೇನುಗಾರಿಕೆ ಅಭಿವೃದ್ಧಿಯ ಆಸಕ್ತರುಗಳಾದ ಜೇನು ಸಾಕಾಣಿಕೆದಾರರು, ಸಂಸ್ಕರಣಗಾರರು, ಮಾರಾಟಗಾರರು, ಸಂಶೋಧಕರುಗಳ ಮುಖೇನ ಸಣ್ಣ ಮತ್ತು ಅತಿ ಸಣ್ಣ ರೈತ ವರ್ಗಕ್ಕೆ ಸುಸ್ಥಿರ ಮತ್ತು ನಿರಂತರ ಲಾಭದಾಯಕ ಉದ್ದಿಮೆಯನ್ನಾಗಿ ರೂಪಿಸುವ ಉದ್ದೇಶವನ್ನು ಈ ಯೋಜನೆಯಲ್ಲಿ ಸಂಕಲ್ಪಿಸಲಾಗಿರುತ್ತದೆ.

2014-15 ನೇ ಸಾಲಿನಲ್ಲಿ ಸದರಿ ಯೋಜನೆಯಡಿ ನಿಗದಿತ ಅನುದಾನ ರೂ. 200.00 ಲಕ್ಷಗಳು. ಈ ಯೋಜನೆಯ ಅನುಷ್ಠಾನದ ಶೇಕಡಾ.50 ರಂತೆ ಪ್ರೋತ್ಸಾಹಯುತ ಸಹಾಯಧನವನ್ನು ಇತರರಿಗೆ ಹಾಗೂ ಶೇ.90 ರಷ್ಟು ಸಹಾಯಧನವನ್ನು ಪರಿಶಿಷ್ಟ ಜಾತಿ ಹಾಗೂ ಪಂಗಡದ ರೈತರಿಗೆ ವಿತರಿಸಲಾಗುವುದು.

## III. ಯೋಜನೆಯ ಉದ್ದೇಶಗಳು:

1. ಆಯ್ಕೆ ಮಾಡಿದ ಫಲಾನುಭವಿಗಳಿಗೆ ಜೇನುಗಾರಿಕೆ ತರಬೇತಿ ಹಾಗೂ ಆಸಕ್ತ ಫಲಾನುಭವಿಗಳಿಗೆ ಜೇನು ಪೆಟ್ಟಿಗೆ ಹಾಗೂ ಜೇನು ಕುಟುಂಬಗಳನ್ನು ನೀಡುವುದು.

2. ಜೇನು ಕೃಷಿ ವಿಭಾಗದ ಅಧಿಕಾರಿ/ತಾಂತ್ರಿಕ ಸಿಬ್ಬಂದಿಗಳಿಗೆ ಹಾಗೂ ಇಲಾಖಾ ಸಿಬ್ಬಂದಿಗೆ ಜೇನು ಕೃಷಿಯ ನೂತನ ಅವಿಷ್ಕಾರಗಳ ಬಗ್ಗೆ ತರಬೇತಿ ಆಯೋಜಿಸುವುದು.
3. ಮಧುವನಗಳ ಸ್ಥಾಪನೆಗೆ ಫಲಾನುಭವಿಗಳಿಗೆ ಸಹಾಯಧನ ನೀಡುವುದು.
4. ಜೇನುಗಾರಿಕೆ ಅಭಿವೃದ್ಧಿಗಾಗಿ ಹೊರಗುತ್ತಿಗೆ ಆಧಾರದಲ್ಲಿ ಸಿಬ್ಬಂದಿಗಳನ್ನು ನೇಮಕ ಮಾಡಿಕೊಳ್ಳುವುದು.
5. 2012-13 ಹಾಗೂ 2013-14 ನೇ ಸಾಲಿನಲ್ಲಿ ಅಭಿವೃದ್ಧಿ ಪಡಿಸಿದ ಮಧುವನಗಳ ನಿರ್ವಹಣೆ.
6. ಭಾಗಮಂಡಲ ತರಬೇತಿ ಕೇಂದ್ರದ ಅಭಿವೃದ್ಧಿಗೆ ಅನುದಾನ
7. ಪ್ರಚಾರ / ಸಾಹಿತ್ಯ / ಹಾಗೂ ಆಡಳಿತಾತ್ಮಕ ವೆಚ್ಚ ಭರಿಸುವುದು.

## IV. ರಾಜ್ಯ ವಲಯದ ಕಾರ್ಯಕ್ರಮಗಳು ( ಎಸ್-21) ಅಡಿ ವಿವಿಧ ಕಾಂಪೋನೆಂಟ್ ಗಳನ್ನು ಅನುಷ್ಠಾನಗೊಳಿಸಲು ಮಾರ್ಗಸೂಚಿ

### 1. ಜೇನು ಕೃಷಿಯಲ್ಲಿ ತರಬೇತಿ ಕಾರ್ಯಕ್ರಮ.

**ಉದ್ದೇಶ:** ಫಲಾನುಭವಿಗಳಿಗೆ ಜೇನು ಕೃಷಿ ಕುರಿತಂತೆ ತರಬೇತಿ ನೀಡುವ ಮೂಲಕ ಜೇನು ಕೃಷಿ ಕೈಗೊಳ್ಳಲು ಉತ್ತೇಜಿಸುವುದು.

#### 1. ರೈತರಿಗೆ ಹಾಗೂ ಜೇನು ಕೃಷಿ ಆಸಕ್ತರಿಗೆ

- ಜೇನು ಕೃಷಿ ಮಾಡಲು ಆಸಕ್ತಿ ಇರುವ ರೈತರನ್ನು ತರಬೇತಿಗೆ ಆಯ್ಕೆ ಮಾಡಿಕೊಳ್ಳುವುದು.
- ತರಬೇತಿಯಲ್ಲಿ ನಗರ/ಪಟ್ಟಣ ಪ್ರದೇಶಗಳ ಆಸಕ್ತ ಹವ್ಯಾಸಿ/ವೃತ್ತಿಪರ ಜೇನುಕೃಷಿಕರೂ ಸಹಾ ಭಾಗವಹಿಸಬಹುದಾಗಿರುತ್ತದೆ. ತರಬೇತಿ ಕಾರ್ಯಕ್ರಮವನ್ನು ಗ್ರಾಮೀಣ ಪ್ರದೇಶಗಳಲ್ಲಿ ಮಾತ್ರ ಹಮ್ಮಿಕೊಳ್ಳಲಾಗುವುದು.
- ಒಂದು ತರಬೇತಿ ಕಾರ್ಯಕ್ರಮದಲ್ಲಿ ಗರಿಷ್ಠ 30 ಫಲಾನುಭವಿಗಳಿರತಕ್ಕದ್ದು.
- ತರಬೇತಿಯನ್ನು ಆಯಾ ಪ್ರದೇಶದಲ್ಲಿ ಸ್ಥಳೀಯವಾಗಿ ಸ್ಥಾಪಿತವಾಗಿರುವ ಜೇನುಕೃಷಿ ಸಹಕಾರ ಸಂಘಗಳ ವ್ಯಾಪ್ತಿಯಲ್ಲಿ / ಸ್ವಯಂ ಸೇವಾ ಸಂಸ್ಥೆಗಳ ಸಹಕಾರದೊಂದಿಗೆ ಆಯೋಜಿಸುವುದು.
- ತರಬೇತಿ ನೀಡಲು ಕೃಷಿ ವಿಜ್ಞಾನ ಕೇಂದ್ರ, ಕೃಷಿ ವಿಶ್ವ ವಿದ್ಯಾಲಯ, ಸರ್ಕಾರೇತರ ಸಂಘ ಸಂಸ್ಥೆಗಳು ಮತ್ತು ತಾಂತ್ರಿಕವಾಗಿ ನಿಪುಣರಾಗಿರುವ ನಿವೃತ್ತ ಇಲಾಖಾ ಅಧಿಕಾರಿಗಳು/ ಪ್ರಾಧ್ಯಾಪಕರು, ಪ್ರಗತಿಪರ ರೈತರು, ಜೇನು ಕೃಷಿ ವಿಷಯದಲ್ಲಿ ಪರಿಣಿತರಾದ ಯಾವುದೇ ಸಂಪನ್ಮೂಲ ವ್ಯಕ್ತಿಯನ್ನು ಆಯ್ಕೆ ಮಾಡಿ ತರಬೇತಿಯನ್ನು ನೀಡಲು ಇವರ ಸೇವೆಯನ್ನು ಪಡೆಯಬಹುದು.
- ಎರಡು ದಿವಸದ ತರಬೇತಿ ಅವಧಿಯಲ್ಲಿ ಮೊದಲನೆ ದಿನ ನಿಗದಿತ ಪಠ್ಯಕ್ರಮಗಳ ಬೋಧನೆ ಮತ್ತು ಎರಡನೇ ದಿನ ಪ್ರಾಯೋಗಿಕ ತರಬೇತಿ ಮತ್ತು ಇಲಾಖಾ / ಪ್ರಗತಿಪರ ಜೇನುಕೃಷಿಕರ ಮಧುವನಗಳಲ್ಲಿ ಪ್ರಾತ್ಯಕ್ಷಿಕೆ / ಭೇಟಿ ನೀಡುವುದು.
- ಪ್ರತಿ ತರಬೇತಿಗೆ ಗರಿಷ್ಠ ರೂ 21,000/- ಗಳಂತೆ ವೆಚ್ಚ ಭರಿಸಬಹುದಾಗಿದ್ದು, ಪ್ರತಿ ಫಲಾನುಭವಿಗೆ ಪ್ರತಿ ದಿನಕ್ಕೆ ರೂ. 350/- ರಂತೆ ವೆಚ್ಚ ಭರಿಸುವುದು. ವೆಚ್ಚದ ವಿವರಗಳು ಈ ಕೆಳಕಂಡಂತಿವೆ.
- ಸದರಿ ಉದ್ದೇಶಕ್ಕಾಗಿ ರೂ.7.98 ಲಕ್ಷಗಳ ಅನುದಾನ ಕಾಯ್ದಿರಿಸಲಾಗಿದೆ.

**ರೈತರ ತರಬೇತಿ ಕಾರ್ಯಕ್ರಮಗಳ ವೆಚ್ಚದ ವಿವರ**

**(ಗರಿಷ್ಟ 30 ಫಲಾನುಭವಿಗಳಿಗೆ 2 ದಿನಕ್ಕೆ)**

| ಕ್ರಮ ಸಂಖ್ಯೆ | ವಿವರಗಳು | | ಗರಿಷ್ಠ ಮೊತ್ತ (ರೂ. ಗಳಲ್ಲಿ) |
|---|---|---|---|
| 1 | ತರಬೇತಿಯನ್ನು ಪಡೆಯಲು ಆಯ್ಕೆಯಾದ ಪ್ರತಿ ಫಲಾನುಭವಿಗೆ ತರಬೇತಿ ಭತ್ಯೆ. | 100X30X2 | 6000 |
| 2 | Audio Visual aids ಮತ್ತು ಪೀಠೋಪಕರಣ ಬಾಡಿಗೆ (ಒಂದು ದಿನಕ್ಕೆ) | | 2500 |
| 3 | ಬ್ಯಾನರ್, ತಾಂತ್ರಿಕ ಮಾಹಿತಿ ಕರ ಪತ್ರ ಮುದ್ರಣ / ಲೇಖನ ಸಾಮಗ್ರಿಗಳು | | 2000 |
| 4 | ಸಂಪನ್ಮೂಲ ವ್ಯಕ್ತಿಗಳಿಗೆ ಗೌರವ ಧನ (ಇಬ್ಬರಿಗೆ) | 750X2 | 1500 |
| 5 | ಫಲಾನುಭವಿಗಳಿಗೆ ಊಟ / ಉಪಹಾರದ ವೆಚ್ಚ | 100X30X2 | 6000 |
| 6 | ಪ್ರಾಯೋಗಿಕ ತರಬೇತಿಗೆ ಮಧುವನಗಳಿಗೆ ಪ್ರವಾಸ ವೆಚ್ಚ | | 3000 |
| | **ಒಟ್ಟು** | | **21000** |

ತರಬೇತಿಗೆ ನಿಗದಿಪಡಿಸಿದ ಒಟ್ಟು ವೆಚ್ಚವನ್ನು ಮೀರದಂತೆ ಅವಶ್ಯಕತೆಗೆ ಅನುಗುಣವಾಗಿ ಘಟಕವಾರು ನಿಗದಿಪಡಿಸಿದ ಅನುದಾನದಲ್ಲಿ ಅಲ್ಪ ಬದಲಾವಣೆ ಮಾಡಿಕೊಳ್ಳಬಹುದಾಗಿರುತ್ತದೆ.

**ii. ಜೇನು ಕೃಷಿ ವಿಭಾಗದ ಅಧಿಕಾರಿ/ ತಾಂತ್ರಿಕ ಸಿಬ್ಬಂದಿಗಳಿಗೆ ಹಾಗೂ ಇಲಾಖೆಯ ತೋಟಗಾರಿಕೆ ಅಧಿಕಾರಿಗಳಿಗೆ ತರಬೇತಿ**

- ಜೇನು ಕೃಷಿ ವಿಭಾಗದಲ್ಲಿ ಕಾರ್ಯ ನಿರ್ವಹಿಸುತ್ತಿರುವ ಅಧಿಕಾರಿ ಮತ್ತು ಸಿಬ್ಬಂದಿಗಳಿಗೆ ಹಾಗೂ ಇಲಾಖೆಯ ತೋಟಗಾರಿಕೆ ಅಧಿಕಾರಿಗಳಿಗೆ ಜೇನು ಕೃಷಿಯ ನೂತನ ತಂತ್ರಜ್ಞಾನದ ಕುರಿತು ತರಬೇತಿಯನ್ನು ಕೃಷಿ ವಿಶ್ವವಿದ್ಯಾಲಯ/ಕೃಷಿ ವಿಜ್ಞಾನ ಕೇಂದ್ರಗಳು / ತೋಟಗಾರಿಕೆ ವಿಶ್ವವಿದ್ಯಾಲಯಗಳು/CBRTI, ಪುಣೆ/ ಸಂಶೋಧನಾ ಕೇಂದ್ರಗಳ ಮುಖಾಂತರ ಆಯೋಜಿಸುವುದು.
- ತರಬೇತಿ ಕಾರ್ಯಕ್ರಮದಲ್ಲಿ ಪ್ರತಿತಂಡಕ್ಕೆ ಅಧಿಕಾರಿ/ ಸಿಬ್ಬಂದಿ (ಅಗತ್ಯವಿದ್ದಲ್ಲಿ ಆಯ್ದ ಆಸಕ್ತ ರೈತರನ್ನು ಆಯ್ಕೆ ಮಾಡಿಕೊಳ್ಳುವುದು) ಒಳಗೊಂಡಂತೆ 30 ರಿಂದ 40 ಜನ ಅಧಿಕಾರಿ/ ಸಿಬ್ಬಂದಿಗಳಿರಬೇಕು.
- ಜೇನು ಕೃಷಿಯಲ್ಲಿ ಮಧುವನಗಳ ಅಭಿವೃದ್ಧಿಗೆ ಸಂಬಂಧಿಸಿದ ಮರಿಜೇನು/ ಜೇನು ತುಪ್ಪ ಉತ್ಪಾದನಾ ಕೇಂದ್ರಗಳಿಗೆ ಬೇಕಾದ ನೂತನ ಅವಿಷ್ಕಾರಗಳು/ ಕೀಟ /ರೋಗಗಳ ನಿರ್ವಹಣೆ ಬಗ್ಗೆ ತರಬೇತಿ ಏರ್ಪಡಿಸುವುದು.
- ಉತ್ಪಾದನಾ ಜೇನು ತುಪ್ಪದ ಬಗ್ಗೆ ಮಾರುಕಟ್ಟೆ ವ್ಯವಸ್ಥೆ/ ಜೇನುತುಪ್ಪಗಳ ಸಂಸ್ಕರಣೆ /ಜೇನು ತುಪ್ಪ ಗುಣಮಟ್ಟ ಪರೀಕ್ಷಣೆ ಇತ್ಯಾದಿ ಬಗ್ಗೆ ತರಬೇತಿ ಪಡೆಯುವುದು.
- ಜೇನುಗಾರಿಕೆಯ ಆಧುನಿಕ ತಂತ್ರಜ್ಞಾನಗಳ ಕುರಿತಂತೆ ವಿಶೇಷ ತರಬೇತಿ ಆಯೋಜಿಸುವುದು.

- ಸದರಿ ತರಬೇತಿ ಕಾರ್ಯಕ್ರಮಗಳನ್ನು ಏರ್ಪಡಿಸುವ ಸಲುವಾಗಿ ರೂ.8.00 ಲಕ್ಷಗಳ ಅನುದಾನ ಕಾಯ್ದಿರಿಸಲಾಗಿದೆ.

## 2. ಜೇನುಪೆಟ್ಟಿಗೆ ಮತ್ತು ಜೇನುಕುಟುಂಬಗಳಿಗೆ ಸಹಾಯಧನ.

**ಉದ್ದೇಶ:** ರೈತರಿಗೆ / ಆಸಕ್ತರಿಗೆ ಜೇನು ಪೆಟ್ಟಿಗೆ / ಕುಟುಂಬಗಳನ್ನು ನೀಡಿ ಆದಾಯ ಹೆಚ್ಚಿಸಿಕೊಳ್ಳಲು ನೆರವಾಗುವುದು ಹಾಗೂ ತೋಟಗಾರಿಕೆ ಮತ್ತು ಕೃಷಿ ಬೆಳೆಗಳ ಉತ್ಪಾದನೆ / ಉತ್ಪಾದಕತೆ ಹೆಚ್ಚಿಸುವುದು.

- ಫಲಾನುಭವಿಯು ISI-A ಮಾದರಿಯ ಕಾಡುಮರದಿಂದ ಮಾಡಿದ ಹಾಗೂ ಕಡ್ಡಾಯವಾಗಿ ತೇಗ /ಹೊನ್ನೆ /ಮತ್ತಿ ಮರದ 8 ಚೌಕಟ್ಟುಗಳುಳ್ಳ ಜೇನುಸಂಸಾರ ಕೋಣೆ ಮತ್ತು ಜೇನುಕೋಣೆಯುಳ್ಳ ಜೇನುಪೆಟ್ಟಿಗೆಗಳನ್ನು ಮಾತ್ರ ಖರೀದಿಸತಕ್ಕದ್ದು.
- **ಅರ್ಹತೆ ಇರುವ ಫಲಾನುಭವಿಗಳು ಇಲಾಖೆಯ ಅನುಮತಿ ಪತ್ರ ಪಡೆದು ಜೇನುಪೆಟ್ಟಿಗೆ ಹಾಗೂ ಜೇನು ಕುಟುಂಬಕ್ಕೆ ನಿಗಧಿ ಪಡಿಸಿದ ದರದಲ್ಲಿ ಫಲಾನುಭವಿಗಳ ಪಾಲಿನ ಮೊತ್ತವನ್ನು ಜೇನು ಪೆಟ್ಟಿಗೆ ಮತ್ತು ಜೇನು ಕುಟುಂಬಗಳನ್ನು ಸರಬರಾಜು ಮಾಡಲು ನಿರ್ದೇಶನಾಲಯದಿಂದ ಅನುಮೋದಿಸಲ್ಪಟ್ಟಿರುವ ಸರಬರಾಜುದಾರರ ಬಳಿ ಠೇವಣಿ ಇಡಬೇಕು ಮತ್ತು ಸಹಾಯಧನ ಪಡೆಯಲು ಇಲಾಖೆಗೆ ಅರ್ಜಿ ಸಲ್ಲಿಸುವ ಸಮಯದಲ್ಲಿ ಅರ್ಜಿಯ ಜೊತೆಗೆ ಫಲಾನುಭವಿಯ ಪಾಲಿನ ಮೊತ್ತವನ್ನು ಅನುಮೋದಿತ ಸರಬರಾಜು ಸಂಸ್ಥೆಯಲ್ಲಿ ಠೇವಣಿ ಇರಿಸಿರುವ ಬಗ್ಗೆ ಸರಬರಾಜು ಮಾಡುವ ಸಂಸ್ಥೆಯಿಂದ ದೃಢೀಕರಣ ಪಡೆದು, ದೃಢೀಕರಣ ಪತ್ರವನ್ನು ಅರ್ಜಿಯೊಂದಿಗೆ ಲಗತ್ತಿಸಬೇಕು.**
- **ನಂತರ ನಿಗಧಿತ ಸಂಖ್ಯೆಯ ಜೇನು ಪೆಟ್ಟಿಗೆ ಹಾಗೂ ಜೇನುಕುಟುಂಬಗಳು ಸರಬರಾಜು ಸಂಸ್ಥೆಯಿಂದ ಸಂಬಂಧಿಸಿದ ಫಲಾನುಭವಿಗೆ ಸರಬರಾಜಾಗಿರುವುದನ್ನು ಜೇನು ಕೃಷಿ ಅಭಿವೃದ್ಧಿ ಅಧಿಕಾರಿಗಳು/ ಸಂಘಟಕರು/ RSK ಅಧಿಕಾರಿಗಳು ಪರಿಶೀಲಿಸಿ ಲಿಖಿತವಾಗಿ ದೃಢೀಕರಿಸಿದ ನಂತರ ಸಹಾಯಧನದ ಮೊತ್ತವನ್ನು ಅನುಮೋದಿತ ಸರಬರಾಜುದಾರ ಸಂಸ್ಥೆಗೆ ಇಲಾಖೆಯ ವತಿಯಿಂದ ನೇರವಾಗಿ ಪಾವತಿ ಮಾಡುವುದು.**
- **ಆದರೆ, ಜೇನು ಪೆಟ್ಟಿಗೆ ಹಾಗೂ ಜೇನುಕುಟುಂಬದ ಪೂರ್ಣ ಮೊತ್ತವನ್ನು ಸರಬರಾಜು ಸಂಸ್ಥೆಗೆ ಅರ್ಹ ಫಲಾನುಭವಿಗಳು ಪಾವತಿಸಿದಲ್ಲಿ, ಅಂತಹ ಫಲಾನುಭವಿಗಳ ಬ್ಯಾಂಕ್ ಖಾತೆಗೆ ನೇರವಾಗಿ ಸರ್ಕಾರದ ವಂತಿಗೆ/ ಸಹಾಯಧನದ ಮೊತ್ತವನ್ನು ಜಮಾ ಮಾಡುವುದು.**
- ಜೇನುಕುಟುಂಬದ ಅರ್ಹತೆ ಹಾಗೂ ಜೇನು ಪೆಟ್ಟಿಗೆಯ ಅಳತೆ ಹಾಗೂ ಗುಣ ಮಟ್ಟದ ಬಗ್ಗೆ ಸ್ಥಳೀಯವಾಗಿ ಲಭ್ಯವಿರುವ ಜೇನು ಕೃಷಿ ಸಿಬ್ಬಂದಿಯಿಂದ ದೃಢೀಕರಣ ಪಡೆಯತಕ್ಕದ್ದು.
- **ಜೇನು ಪೆಟ್ಟಿಗೆಗಳ ಕೋಡಿಫಿಕೇಷನ್ ವಿವರಗಳನ್ನು ಅನುಬಂಧ -3 ರಲ್ಲಿ ಒದಗಿಸಿದೆ ಹಾಗೂ ಯೋಜನಾವಾರು ಕೋಡಿಫಿಕೇಷನ್ ಮಾಡಿದ ಪೆಟ್ಟಿಗೆಗಳನ್ನು ಮಾತ್ರ ರೈತರು ಖರೀದಿಸಬೇಕಾಗಿರುತ್ತದೆ.**
- ಜೇನುಪೆಟ್ಟಿಗೆಗಳ ಬೆಲೆಯನ್ನು ಗರಿಷ್ಟ ರೂ.2000/- ಗಳಿಗೆ ಹಾಗೂ ಜೇನುಕುಟುಂಬದ ಬೆಲೆಯನ್ನು ಗರಿಷ್ಟ ರೂ.2000/- ಗಳಿಗೆ ನಿಗದಿಗೊಳಿಸಲಾಗಿದೆ. ಜೇನು ಪೆಟ್ಟಿಗೆ ಹಾಗೂ ಜೇನುಕುಟುಂಬದ ಒಂದು ಪ್ಯಾಕೇಜ್ ಗೆ ನಿಗಧಿ ಪಡಿಸಿದ ದರ ಗರಿಷ್ಟ ರೂ. 4,000/- ಗಳು.

- ಜೇನು ಕೃಷಿ ಅಭಿವೃದ್ಧಿಗೆ ಪೂರಕವಾಗಿ ಉತ್ತಮ ಗುಣಮಟ್ಟದ ಜೇನು ಪೆಟ್ಟಿಗೆ ಹಾಗೂ ಜೇನು ಕುಟುಂಬಗಳನ್ನು ರಿಯಾಯಿತಿ ದರದಲ್ಲಿ ಆಸಕ್ತ ಫಲಾನುಭವಿಗಳಿಗೆ ಮಾತ್ರ ವಿತರಿಸಲಾಗುವುದು. ನಗರ / ಪಟ್ಟಣ ಪ್ರದೇಶದ ಹಾಗೂ RTC ಇಲ್ಲದ ಗ್ರಾಮಾಂತರ ಪ್ರದೇಶದ ಆಸಕ್ತ ಫಲಾನುಭವಿಗಳಿಗೆ 1-2 ಹಾಗೂ ಗ್ರಾಮಾಂತರ ಪ್ರದೇಶದ RTC ಹೊಂದಿರುವ ಆಸಕ್ತ ಫಲಾನುಭವಿಗಳಿಗೆ ಮಾತ್ರ ಗರಿಷ್ಟ 4 ಜೇನು ಪ್ಯಾಕೇಜ್

ವರೆಗೆ ಸಹಾಯಧನ ನೀಡಬಹುದಾಗಿರುತ್ತದೆ. RTC ಲಭ್ಯವಿಲ್ಲದ ಫಲಾನುಭವಿಗಳಿಂದ ನಿಗದಿತ ಅರ್ಜಿಯೊಂದಿಗೆ ವಿಳಾಸ ದೃಢೀಕರಣ ಪಡೆಯುವುದು.

- ಜೇನುಕುಟುಂಬ ಮತ್ತು ಜೇನುಪೆಟ್ಟಿಗೆಯ ಪ್ಯಾಕೇಜ್‌ಗೆ ಸಹಾಯಧನವನ್ನು ಇತರರಿಗೆ ಶೇ. 50ಕ್ಕೆ ಹಾಗೂ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗದ ರೈತರಿಗೆ ಶೇ. 90ಕ್ಕೆ ಮಿತಿಗೊಳಿಸಲಾಗಿದೆ.
- ಪ್ರತಿ ಜೇನು ಕುಟುಂಬದಲ್ಲಿ ಸುಮಾರು 4 ಫ್ರೇಂಗಳಷ್ಟು ಕೆಲಸಗಾರ ಜೇನುದುಂಬಿಗಳು ಹಾಗೂ ಒಂದು ಪರಿಪಕ್ವವಾದ ರಾಣಿ ಜೇನುದುಂಬಿ ಕಡ್ಡಾಯವಾಗಿ ಇರತಕ್ಕದ್ದು.
- ಜೇನು ಪೆಟ್ಟಿಗೆ ಹಾಗೂ ಜೇನು ಕುಟುಂಬಗಳಿಗೆ ಸಹಾಯಧನ ನೀಡುವ ಸಲುವಾಗಿ ರೂ.47.50 ಲಕ್ಷಗಳ ಅನುದಾನ ಮೀಸಲಿಡಲಾಗಿದೆ.

## 3. ಜೇನುಗಾರಿಕೆ ವಿಸ್ತರಣಾ ಸಿಬ್ಬಂದಿಗೆ ಗೌರವಧನ.

**ಉದ್ದೇಶ: ಮಧುವನಗಳ ನಿರ್ವಹಣೆ, ಜೇನು ಕೃಷಿ ಕಾರ್ಯಕ್ರಮಗಳ ವಿಸ್ತರಣೆ ಮೂಲಕ ಜೇನು ಕೃಷಿ ಅಭಿವೃದ್ಧಿಗೆ ಪೂರಕವಾಗಿ ಕಾರ್ಯನಿರ್ವಹಿಸುವುದು**

ಜೇನುಗಾರಿಕೆಯು ತೋಟಗಾರಿಕೆ/ಕೃಷಿ/ ಅರಣ್ಯ ಆಧಾರಿತವಾಗಿದ್ದು ಕನಿಷ್ಟ ಹೂಡಿಕೆಯೊಂದಿಗೆ ಗರಿಷ್ಟ ಆದಾಯ ಗಳಿಸಬಹುದಾಗಿರುತ್ತದೆ. 2012-13 ನೇ ಸಾಲು ಹಾಗೂ 2013-14 ನೇ ಸಾಲಿನಲ್ಲಿ ಇಲಾಖೆಯ ಕ್ಷೇತ್ರ/ ನರ್ಸರಿಗಳು/ಮಧುವನಗಳಲ್ಲಿ ಮರಿಜೇನು ಉತ್ಪಾದನೆ ಹಾಗೂ ಜೇನು ತುಪ್ಪ ಉತ್ಪಾದನೆ ಕಾರ್ಯಕ್ರಮಗಳನ್ನು ತೆಗೆದುಕೊಂಡಿದ್ದು, ಸದರಿ ಮಧುವನಗಳ ನಿರ್ವಹಣೆ ಹಾಗೂ ಜಿಲ್ಲೆಯ ಜೇನುಗಾರಿಕೆ ಅಭಿವೃದ್ಧಿ ಕಾರ್ಯಗಳನ್ನು ಕೈಗೊಳ್ಳಲು ಜೇನು ಗಾರಿಕೆ ವಿಸ್ತರಣಾ ಸಿಬ್ಬಂದಿಯ ಅಗತ್ಯ ಇರುತ್ತದೆ. ಜೇನುಗಾರಿಕೆಯಲ್ಲಿ ನಿರತವಾಗಿರುವ ಜಿಲ್ಲೆಗಳಲ್ಲಿ ವಿಸ್ತರಣಾ ಸಿಬ್ಬಂದಿಯ ಕೊರತೆಯಿದ್ದು 2013-14 ನೇ ಸಾಲಿನಲ್ಲಿ ಹೊರಗುತ್ತಿಗೆ ಆಧಾರದಲ್ಲಿ ಈಗಾಗಲೆ ಕೊಡಗಿನ ಭಾಗಮಂಡಲದಲ್ಲಿ 3 ತಿಂಗಳು ವಿಶೇಷ ತರಬೇತಿ ಪಡೆದವರನ್ನು / ವೃತ್ತಿಪರ ಜೇನುಕೃಷಿಕರು / ನಿವೃತ್ತ ಜೇನುಗಾರಿಕೆ ಸಿಬ್ಬಂದಿಯನ್ನು ಗುರುತಿಸಿ ನೇಮಕ ಮಾಡಿಕೊಳ್ಳಲಾಗಿತ್ತು. 2014-15 ನೇ ಸಾಲಿಗೂ ಹೊರ ಗುತ್ತಿಗೆಯಲ್ಲಿ ಸಿಬ್ಬಂದಿಯನ್ನು ಪಡೆಯಲು ಅನುಮತಿ ನೀಡಲಾಗಿರುತ್ತದೆ.

ಜಿಲ್ಲಾವಾರು ನಿಗದಿಪಡಿಸಿದ ಹೊರಗುತ್ತಿಗೆ ಆಧಾರದ ಸಿಬ್ಬಂದಿಗಳ ವಿವರಗಳನ್ನು ಅನುಬಂಧ- 2 ರಲ್ಲಿ ಲಗತ್ತಿಸಿದೆ ರಾಜ್ಯದಲ್ಲಿ ಜೇನುಗಾರಿಕೆ ಅಭಿವೃದ್ಧಿ ಕಾರ್ಯಗಳ ಅನುಷ್ಠಾನಕ್ಕೆ ಸದರಿ ಸಿಬ್ಬಂದಿ ಸೇವೆಯನ್ನು ಪಡೆಯಲು ಕಾರ್ಯಕ್ರಮ ರೂಪಿಸಲಾಗಿದೆ.

- ಹೊರಗುತ್ತಿಗೆಯಲ್ಲಿ ನೇಮಕವಾದ ಪ್ರತಿ ವಿಸ್ತರಣಾ ಸಿಬ್ಬಂದಿಗೆ ಮಾಹೆಯಾನ ರೂ.10,000/- ದಂತೆ 9 ತಿಂಗಳ ಅವಧಿಗೆ ಮಾತ್ರ ನೇಮಿಸಿಕೊಳ್ಳಲಾಗುವುದು. ಪ್ರತ್ಯೇಕವಾಗಿ ಯಾವುದೇ ತರಹದ ತುಟ್ಟಿ ಭತ್ಯೆ ಹಾಗೂ ಪ್ರವಾಸ ಭತ್ಯೆಗಳನ್ನು ನೀಡುವುದಿಲ್ಲ.

  ಈ ರೀತಿ ನೇಮಕವಾದ ಸಿಬ್ಬಂದಿಯ ಕರ್ತವ್ಯಗಳು ಕೆಳಗಿನಂತಿರುತ್ತವೆ.

- ಜೇನುಗಾರಿಕೆಯಲ್ಲಿ ನಿರತವಾಗಿದ್ದು ವಿಸ್ತರಣಾ ಸಿಬ್ಬಂದಿಯ ಕೊರತೆಯಿರುವ ಜಿಲ್ಲೆಗಳಲ್ಲಿ ನೇಮಿಸಿಕೊಳ್ಳಲಾದವರು ನೇಮಿಸಿದ ತಾಲ್ಲೂಕು ಕೇಂದ್ರದ ಹಿಸತೋನಿ/ಸತೋನಿ ರವರ ಕಚೇರಿಯನ್ನು ಕೇಂದ್ರಸ್ಥಾನವನ್ನಾಗಿ ಮಾಡಿಕೊಂಡು ಜೇನುಗಾರಿಕೆ ಕಾರ್ಯ ನಿರ್ವಹಿಸತಕ್ಕದ್ದು.
- ತಮ್ಮ ಕಾರ್ಯ ವ್ಯಾಪ್ತಿಯ ತಾಲ್ಲೂಕಿನ ಎಲ್ಲಾ ಗ್ರಾಮಗಳಿಗೂ ನಿಗದಿತವಾಗಿ (Periodically) ಭೇಟಿ ಮಾಡಿ ಅಲ್ಲಿನ ಎಲ್ಲಾ ಜೇನು ಕೃಷಿಕರಿಗೂ ಇಲಾಖೆಯ ಜೇನು ಆಧಾರಿತ ಯೋಜನೆಗಳಾದ NHM/RKVY/ ರಾಜ್ಯ ವಲಯ/ಜಿಲ್ಲಾವಲಯ ಬಗ್ಗೆ ಸೂಕ್ತ ತಿಳುವಳಿಕೆ ನೀಡಬೇಕು.

- ತಮ್ಮ ಕಾರ್ಯ ವ್ಯಾಪ್ತಿಯ ತಾಲ್ಲೂಕಿನ ಎಲ್ಲಾ ಗ್ರಾಮಗಳಿಗೂ ನಿಯಮಿತವಾಗಿ (Periodically) ಭೇಟಿ ಮಾಡಿ ಅಲ್ಲಿನ ಎಲ್ಲಾ ಜೇನು ಕೃಷಿಕರಲ್ಲಿರುವ ಜೇನು ಪೆಟ್ಟಿಗೆಗಳನ್ನು ಪರಿಶೀಲಿಸಿ ಅವುಗಳ ಅಗತ್ಯವನ್ನು ಪೂರೈಸುವುದು ಹಾಗೂ ಜೇನುಕೃಷಿಕರಿಗೆ ಅದರ ಮಾಹಿತಿಯನ್ನು ನೀಡುವುದು.
- ಜೇನುಕೃಷಿಗೆ ಅನುಕೂಲವಾದ ಸಸ್ಯವರ್ಗಗಳಿರುವ ಸ್ಥಳಗಳನ್ನು (POCKETS) ಗುರುತಿಸುವುದು ಹಾಗೂ ಅಲ್ಲಿ ಜೇನುಗಾರಿಕೆ ಅಭಿವೃದ್ಧಿ ಪಡಿಸಲು ಕ್ರಮಕೈಗೊಳ್ಳುವುದು.
- ಜೇನುಕೃಷಿಕರಿಗೆ ಅಗತ್ಯವಾದ ಜೇನುಪೆಟ್ಟಿಗೆ/ಜೇನುಕುಟುಂಬ/ ಇತರೆ ಜೇನು ಪರಿಕರಗಳನ್ನು ಒದಗಿಸಲು ನೆರವಾಗುವುದು.
- ತಮ್ಮ ಕಾರ್ಯವ್ಯಾಪ್ತಿಯ ತೋಟಗಾರಿಕೆ ಕ್ಷೇತ್ರ / ಮಧುವನಗಳಲ್ಲಿ ವರ್ಷದ ಎಲ್ಲಾ ಕಾಲವೂ ಕನಿಷ್ಟ 10 ಜೇನುಕುಟುಂಬ ಇರುವಂತೆ ನೋಡಿಕೊಳ್ಳುವುದು.
- ಇಲಾಖೆಯಿಂದ ನೀಡಲಾಗಿರುವ ಜೇನುಕೃಷಿ ತರಬೇತಿಯು ಯಶಸ್ವಿಯಾಗಿ ಅರ್ಹ ಫಲಾನುಭವಿಗೆ ತಲುಪುವಂತೆ ನೋಡಿಕೊಳ್ಳತಕ್ಕದ್ದು ಹಾಗೂ ತರಬೇತಿ ಸ್ಥಳ/ಫಲಾನುಭವಿಗಳನ್ನು ಗುರುತಿಸಿ ತರಬೇತಿಯನ್ನು ನಿರ್ವಹಿಸುವುದು.
- ಇಲಾಖೆಯಿಂದ ಕಾಲ ಕಾಲಕ್ಕೆ ನಿಗದಿಪಡಿಸುವ ಇತರೆ ಕಾರ್ಯಗಳನ್ನು ನಿರ್ವಹಿಸುವುದು.
- ಜೇನುಗಾರಿಕೆಯಲ್ಲಿ ನಿರತವಲ್ಲದ ಜಿಲ್ಲೆಗಳಲ್ಲಿ ನೇಮಿಸಿಕೊಳ್ಳಲಾದವರು ನೇಮಿಸಿದ ಜಿಲ್ಲಾ ಕೇಂದ್ರದ ತೋಟಗಾರಿಕೆ ಉಪನಿರ್ದೇಶಕರು (ಜಿ.ಪಂ) ರವರ ಕಚೇರಿಯನ್ನು ಕೇಂದ್ರಸ್ಥಾನವನ್ನಾಗಿ ಮಾಡಿಕೊಂಡು ಜೇನುಗಾರಿಕೆ ಕಾರ್ಯ ನಿರ್ವಹಿಸತಕ್ಕದ್ದು.
- ಜಿಲ್ಲೆಯ ಎಲ್ಲಾ ತಾಲ್ಲೂಕುಗಳಲ್ಲಿ ನಿಯಮಿತವಾಗಿ (Periodically) ಭೇಟಿ ಮಾಡಿ ಅಲ್ಲಿನ ಎಲ್ಲಾ ಜೇನು ಕೃಷಿಕರಿಗೂ ಇಲಾಖೆಯ ಜೇನು ಆಧಾರಿತ ಯೋಜನೆಗಳಾದ NHM/RKVY/ರಾಜ್ಯ/ ಜಿಲ್ಲಾ ವಲಯ ಬಗ್ಗೆ ಸೂಕ್ತ ತಿಳುವಳಿಕೆ ನೀಡಬೇಕು.
- ಅಲ್ಲದೇ ಮೇಲೆ ತಿಳಿಸಿದ ಎಲ್ಲಾ ಕಾರ್ಯಕ್ರಮಗಳನ್ನು ತಪ್ಪದೇ ಪಾಲಿಸುವುದು ಮತ್ತು ಜೇನುಗಾರಿಕೆಯ ಸಮಗ್ರ ಅಭಿವೃದ್ಧಿಗೆ ಎಲ್ಲಾ ಅಗತ್ಯ ಕ್ರಮ ವಹಿಸುವುದು.
- ಸದರಿ ಕಾರ್ಯಕ್ರಮದ ಅನುಷ್ಠಾನಕ್ಕಾಗಿ ರೂ.34.20 ಲಕ್ಷಗಳ ಅನುದಾನ ನಿಗಧಿಪಡಿಸಿದೆ.

**4. ಅಭಿವೃದ್ಧಿ ಪಡಿಸಲಾದ ಮಧುವನಗಳ ನಿರ್ವಹಣೆ.**

2012-13 ನೇ ಸಾಲಿನಲ್ಲಿ ಸ್ಥಾಪಿಸಿದ ಮರಿಜೇನು ಉತ್ಪಾದನಾ ಕೇಂದ್ರ / ಜೇನು ತುಪ್ಪ ಉತ್ಪಾದನಾ ಕೇಂದ್ರಗಳು ಹಾಗೂ 2013-14ನೇ ಸಾಲಿನಲ್ಲಿ ಸ್ಥಾಪಿಸಿದ ಮಧುವನಗಳ (ಮರಿ ಜೇನು ಉತ್ಪಾದನಾ ಕೇಂದ್ರಗಳು) ನಿರ್ವಹಣೆಗಾಗಿ ಪ್ರಸ್ತುತ ಸಾಲಿನಲ್ಲಿ ಅನುದಾನ ಒದಗಿಸಲಾಗಿದೆ.

2013-14ನೇ ಸಾಲಿನಲ್ಲಿ ಇಲಾಖೆಯಲ್ಲಿ ಈಗಾಗಲೆ ಕಾರ್ಯನಿರ್ವಹಿಸುತ್ತಿರುವ ಆಯ್ಕೆ ಮಾಡಿದ ತೋಟಗಾರಿಕೆ ಇಲಾಖೆಯ Nursery ಗಳಲ್ಲಿ ಹಾಗೂ ಭದ್ರತೆಯಿರುವ ಹಾಗೂ ಪರಾಗ ಪುಷ್ಪರಸ ಹೆಚ್ಚಾಗಿಬರುವ ಮರಗಿಡಗಳಿಂದ ಕೂಡಿರುವ ತೋಟಗಾರಿಕೆ ಇಲಾಖೆಯ ಕಚೇರಿಯ ಅಂಗಳಗಳಲ್ಲಿನ ಮರಗಿಡಗಳ ಆಶ್ರಯದಲ್ಲಿ ಜೇನುಪೆಟ್ಟಿಗೆಗಳನ್ನು ನಿರ್ವಹಿಸಲು 76 ಮಧುವನಗಳ ಸ್ಥಾಪನೆಗೆ ಅನುದಾನ ನೀಡಲಾಗಿತ್ತು. ಇದರಲ್ಲಿ ಅಂತಿಮವಾಗಿ 72 ಮಧುವನಗಳನ್ನು ಸ್ಥಾಪಿಸಲಾಗಿರುತ್ತದೆ. ಸದರಿ ಮಧುವನಗಳಲ್ಲಿ ವರ್ಷದ ಎಲ್ಲಾ ಕಾಲಕ್ಕೂ ಕನಿಷ್ಟ 10 ಜೇನುಕುಟುಂಬಗಳನ್ನು ನಿರ್ವಹಿಸುವಂತೆ ನೋಡಿಕೊಳ್ಳಬೇಕು. ಒಂದು ಮರಿಜೇನು ಕೇಂದ್ರದಲ್ಲಿ 10 ಜೇನು ಕುಟುಂಬದಿಂದ ಒಂದು ವರ್ಷಕ್ಕೆ ಕನಿಷ್ಟ 20 ಮರಿಜೇನು ಕುಟುಂಬಗಳನ್ನು ಉತ್ಪಾದಿಸಲು ಅಗತ್ಯ ಕ್ರಮ ಕೈಗೊಳ್ಳುವುದು.

**10 ಕುಟುಂಬಗಳನ್ನೊಳಗೊಂಡ 10 ಜೇನು ಪೆಟ್ಟಿಗೆಗಳನ್ನು ಒಂದು ಘಟಕವನ್ನಾಗಿ ಪರಿಗಣಿಸಲಾಗಿದ್ದು, ಘಟಕವಾರು ನಿರ್ವಹಣೆಗೆ ಈ ಕೆಳಕಂಡಂತೆ ಅನುದಾನ ಒದಗಿಸಲಾಗಿದೆ.**

**10 ಕುಟುಂಬಗಳ ಒಂದು ಘಟಕದ ನಿರ್ವಹಣೆಗೆ ಅನುದಾನ**

| ಕ್ರ.ಸಂ | ವಿವರಗಳು | ಪ್ರಮಾಣ ಮತ್ತು ದರ | ಅನುದಾನ (ರೂ.ಗಳಲ್ಲಿ) |
|---|---|---|---|
| 1 | ಸಕ್ಕರೆ | 10Kg Xರೂ.45X5 ತಿಂಗಳು | 2250 |
| 2 | ಕೃತಕ ಎರಿ ತಳಹದಿ (CF Sheet) | 1.5Kg Xರೂ.1000 | 1500 |
| 3 | Feeding cups | 10 nos Xರೂ.20 | 200 |
| 4 | ಇತರೆ ವೆಚ್ಚ | | 50 |
| | **ಒಟ್ಟು** | | **4000** |

- **ಸದರಿ ಮಧುವನಗಳಲ್ಲಿ ಉತ್ಪಾದಿಸಲಾದ ಮರಿಜೇನು ಕುಟುಂಬ / ಜೇನುತುಪ್ಪವನ್ನು ನಿಮ್ಮ ಹಂತದಲ್ಲಿಯೇ ವಿಲೇ ಮಾಡಿ ಬಂದ ಹಣವನ್ನು ಇಲಾಖೆಯ KSHDA ಖಾತೆಗೆ ಜಮಾ ಮಾಡುವುದು ಹಾಗೂ ಈ ಬಗ್ಗೆ ಪ್ರತಿ ಮಾಹೆ ತಪ್ಪದೇ ಪ್ರಗತಿ ವರದಿಯನ್ನು ಕೇಂದ್ರ ಕಚೇರಿಗೆ ಸಲ್ಲಿಸುವುದು.**
- ಮರಿಜೇನು ಕುಟುಂಬದ ಬೆಲೆ ಈಗಾಗಲೇ ನಿರ್ಧರಿಸಲಾಗಿದ್ದು, ಪ್ರತಿ ಜೇನು ಕುಟುಂಬಕ್ಕೆ ಗರಿಷ್ಟ ರೂ. 2000/- ಹಾಗೂ ಪ್ರತಿ ಕೆ.ಜಿ. ಜೇನುತುಪ್ಪಕ್ಕೆ ರೂ.150 ಗಳನ್ನು ನಿಗದಿಪಡಿಸಲಾಗಿರುತ್ತದೆ. ಸದರಿ ದರದನ್ವಯ ನಿಮ್ಮ ಹಂತದಲ್ಲಿ ವಿಲೇ ಮಾಡತಕ್ಕದ್ದು.
- ಪ್ರತಿ ಜೇನು ಕುಟುಂಬಕ್ಕೆ ತಲಾ 2 ಮರಿ ಜೇನು ಕುಟುಂಬ ಹಾಗೂ ಪ್ರತಿ ಜೇನು ಕುಟುಂಬಕ್ಕೆ 5 ಕೆ.ಜಿ. ಜೇನುತುಪ್ಪದ ಗುರಿಯನ್ನು ನಿಗದಿಪಡಿಸಲಾಗಿದೆ.
- ಸದರಿ ಮಧುವನಗಳ ನಿರ್ವಹಣೆಗೆ ಹೊರಗುತ್ತಿಗೆ ಆಧಾರದ ಮೇಲೆ ಸಿಬ್ಬಂದಿಯನ್ನು ಒದಗಿಸಲಾಗಿರುತ್ತದೆ. ಮರಿಜೇನು/ಜೇನುತುಪ್ಪ ಉತ್ಪಾದನೆಗೆ ಅವಶ್ಯವಿರುವ ತಾಂತ್ರಿಕ ಕೆಲಸಗಳನ್ನು ಸದರಿ ರವರಿಂದ ಮಾಡಿಸತಕ್ಕದ್ದು.
- 2014-15 ನೇ ಸಾಲಿನಲ್ಲಿ ಮಧುವನಗಳ ನಿರ್ವಹಣೆಗಾಗಿ ರೂ.4.72 ಲಕ್ಷಗಳ ಅನುದಾನ ನಿಗದಿಪಡಿಸಲಾಗಿದೆ.

### 5. ಮಧುವನಗಳ ಅಭಿವೃದ್ಧಿ (ಜೇನುಕೃಷಿಕರಿಗೆ / ರೈತರಿಗೆ)

**ಉದ್ದೇಶ**: ರಾಜ್ಯದ ಜೇನುಕೃಷಿಯ ಅಭಿವೃದ್ಧಿಗೆ ಉತ್ತಮ ಗುಣಮಟ್ಟದ ಹಾಗೂ ರೋಗರಹಿತ ಜೇನು ಕುಟುಂಬಗಳನ್ನು ಹೆಚ್ಚಿನ ಸಂಖ್ಯೆಯಲ್ಲಿ ಉತ್ಪಾದಿಸುವುದು ಅತ್ಯಂತ ಅಗತ್ಯವಿರುತ್ತದೆ. ಉತ್ತಮ ಗುಣಮಟ್ಟದ ಜೇನುಕುಟುಂಬಗಳನ್ನು ಉತ್ಪಾದಿಸಿ ವಿತರಿಸುವುದು ಈ ಕಾರ್ಯಕ್ರಮದ ಉದ್ದೇಶವಾಗಿರುತ್ತದೆ.

- ಇದಕ್ಕಾಗಿ ಸ್ಥಾಪಿಸಲು ಉದ್ದೇಶಿಸಿರುವ ಮಧುವನಗಳಲ್ಲಿ ಜೇನು ಕುಟುಂಬಗಳಲ್ಲಿ ಉತ್ತಮವಾದ ತಳಿಯನ್ನು ಆಯ್ಕೆ ಮಾಡಿಕೊಂಡು ಅವುಗಳಲ್ಲಿ ಅಭಿವೃದ್ಧಿ ಪಡಿಸತಕ್ಕದ್ದು.
- ಮೊಟ್ಟೆ ಇಡುವಂತಹ ರಾಣಿಯು ಹೆಚ್ಚಾಗಿ ಕೆಲಸಗಾರ ಮೊಟ್ಟೆಯನ್ನಿಡುವಂತಿದ್ದು, ರೋಗ ನಿರೋಧಕ ಶಕ್ತಿ ಹೊಂದಿರಬೇಕು.
- ಮಧುವನದಲ್ಲಿರುವ ಜೇನು ಕುಟುಂಬಗಳು ಪದೇಪದೇ ಪಲಾಯನ ಮಾಡುವ ಹವ್ಯಾಸವಿರಬಾರದು.

- ಕುಟುಂಬದ ಪ್ರಜಾ ಸಂಖ್ಯೆ ಯಾವ ಕಾಲದಲ್ಲೂ ಹೆಚ್ಚಾಗಿರುವಂತಿರತಕ್ಕದ್ದು.

- ಕೆಲಸಗಾರ ಜೇನು ದುಂಬಿಯು ಹೆಚ್ಚು ದೂರ ಹಾರುವ ಶಕ್ತಿಯನ್ನು ಹೊಂದಿರಬೇಕು.
- ಹೆಚ್ಚು ಪರಾಗ ಮತ್ತು ಪುಷ್ಪರಸ ಸಂಗ್ರಹಿಸುವ ಗುಣ ಹೊಂದಿರತಕ್ಕದ್ದು.
- ಜೇನುತುಪ್ಪದಲ್ಲಿ ಕಡಿಮೆ ನೀರಿನ ಅಂಶವಿರುವ ಅಧಿಕ ಜೇನುತುಪ್ಪ ಉತ್ಪಾದಿಸುವ ಜೇನುಕುಟುಂಬಗಳಿಗೆ ಆದ್ಯತೆ ನೀಡತಕ್ಕದ್ದು.

ಈ ಎಲ್ಲಾಗುಣಗಳನ್ನು ಹೊಂದಿರುವ ಜೇನುಕುಟುಂಬಗಳನ್ನು ಮಧುವನಗಳಲ್ಲಿ ಅಭಿವೃದ್ಧಿ ಪಡಿಸಿ ಅದರಿಂದ ಜೇನುಕೃಷಿಕರಿಗೆ ಮರಿಜೇನು ಕುಟುಂಬಗಳನ್ನು ತಯಾರಿಸಿ ವಿತರಿಸತಕ್ಕದ್ದು.

- ಮಧುವನಗಳನ್ನು ಪಾರಂಭಿಸುವ ರೈತರಿಗೆ / ಆಸಕ್ತರಿಗೆ ಪ್ರತಿ ಮಧುವನದಲ್ಲಿ ಕನಿಷ್ಟ 14 ಜೇನು ಕುಟುಂಬಗಳನ್ನು ಅಭಿವೃದ್ಧಿ ಪಡಿಸಲು ಸಹಾಯಧನ ನೀಡಲಾಗುವುದು.
- ಮಧುವನಗಳನ್ನು ಸ್ಥಾಪಿಸುವ ರೈತರು 14 ಸಂಖ್ಯೆಯ ISI A ಮಾದರಿಯ ಜೇನುಪೆಟ್ಟಿಗೆ ಮತ್ತು ಜೇನು ಕುಟುಂಬ ಹಾಗೂ 28 ಸಂಖ್ಯೆಯ ಮರಿಜೇನು ಪೆಟ್ಟಿಗೆ ಅಲ್ಲದೇ 14 ಸಂಖ್ಯೆಯ ಕಬ್ಬಿಣದ ಸ್ಟಾಂಡ್‌ಗಳು, ಮುಖ ಪರದೆ, ಹೊಗೆತಿದಿ ಇತ್ಯಾದಿಗಳನ್ನು ಖರೀದಿಸಲು ಸಹಾಯಧನ ನೀಡಲಾಗುವುದು. ವಿವರಗಳನ್ನು ಅನುಬಂಧ-4 ರಲ್ಲಿ ಒದಗಿಸಿದೆ.
- ಮೇಲೆ ತಿಳಿಸಿದಂತಹ ಮಧುವನ ಸ್ಥಾಪನೆಗೆ ನಿಗದಿಪಡಿಸಿದ ಗರಿಷ್ಟ ವೆಚ್ಚ ರೂ. 1.00 ಲಕ್ಷಗಳು. ಸಹಾಯಧನದ ಪಾಲು ಇತರರಿಗೆ ಶೇ. 50 ಹಾಗೂ ಪರಿಶಿಷ್ಟ ಜಾತಿ ಹಾಗೂ ಪರಿಶಿಷ್ಟ ಪಂಗಡದ ಫಲಾನುಭವಿಗಳಿಗೆ ಶೇ. 90 ಇರುತ್ತದೆ.
- ಫಲಾನುಭವಿಯು ISI-A ಮಾದರಿಯ ಕಾಡುಮರದಿಂದ ಮಾಡಿದ ಹಾಗೂ ಕಡ್ಡಾಯವಾಗಿ ತೇಗ/ಹೊನ್ನೆ / ಮತ್ತಿ ಮರದ 8 ಚೌಕಟ್ಟುಗಳುಳ್ಳ ಜೇನುಸಂಸಾರ ಕೋಣೆ ಮತ್ತು ಜೇನುಕೋಣೆಯುಳ್ಳ ಜೇನುಪೆಟ್ಟಿಗೆಗಳನ್ನು ಮಾತ್ರ ಖರೀದಿಸತಕ್ಕದ್ದು.
- ಮಧುವನ ಸ್ಥಾಪನೆಗೆ ಇಚ್ಛಿಸುವ ಫಲಾನುಭವಿಗಳು ಸಲ್ಲಿಸಬೇಕಾದ ಅರ್ಜಿ ನಮೂನೆಯನ್ನು ಅನುಬಂಧ-1 ರಲ್ಲಿ ಒದಗಿಸಿದೆ.
- ರೈತರು ಖರೀದಿಸುವ ಜೇನುಪೆಟ್ಟಿಗೆಯ ಅಳತೆ ಮತ್ತು ಗುಣ ಮಟ್ಟದ ಬಗ್ಗೆ ಸ್ಥಳೀಯ ಜೇನು ಕೃಷಿ ಅಭಿವೃದ್ಧಿ ಅಧಿಕಾರಿಗಳು/ ಸಂಘಟಕರು ದೃಢೀಕರಿಸತಕ್ಕದ್ದು.
- **ಮಧುವನಗಳ ಸ್ಥಾಪನೆಗೆ ಸಹಾಯಧನ ಪಡೆಯಲಿಚ್ಛಿಸುವ ಫಲಾನುಭವಿಯು ಕನಿಷ್ಟ 1 ಎಕರೆ ಜಮೀನು ಹೊಂದಿದ್ದು, ಈ ಬಗ್ಗೆ ಕಡ್ಡಾಯವಾಗಿ ಪಹಣಿಯನ್ನು ನೀಡಬೇಕು. ಪಹಣಿ ದಿನಾಂಕ: 01-01-2014ರ ನಂತರದ್ದಾಗಿರಬೇಕು.**
- **ಸದರಿ ಮಧುವನಗಳಲ್ಲಿ ಕೇವಲ ಜೇನುತುಪ್ಪ ಉತ್ಪಾದನೆಗೆ ಮಾತ್ರ ಪ್ರಾಮುಖ್ಯತೆ ನೀಡದೇ, ಜೇನು ಕುಟುಂಬಗಳನ್ನು ಉತ್ಪಾದಿಸಲು ಅಗತ್ಯ ಕ್ರಮಗಳನ್ನು ತೆಗೆದುಕೊಳ್ಳುವುದು.**
- **ಸದರಿ ಮಧುವನಗಳಲ್ಲಿ ಉತ್ಪಾದಿಸಿದ ಜೇನು ಕುಟುಂಬಗಳನ್ನು ಸರ್ಕಾರದ ವಿವಿಧ ಯೋಜನೆಗಳಡಿ ಬಳಸಿಕೊಳ್ಳಲು ಆದ್ಯತೆ ನೀಡುವುದು.**
- ಮಧುವನ ನಿರ್ಮಾಣಕ್ಕೆ ಕೇಂದ್ರ / ರಾಜ್ಯ ಸರ್ಕಾರದ ಇತರೆ ಯಾವುದೇ ಕಾರ್ಯಕ್ರಮದಡಿ ಸಹಾಯಧನ ಪಡೆದುಕೊಂಡಿರುವುದಿಲ್ಲ ಎಂಬ ಬಗ್ಗೆ ಮುಚ್ಚಳಿಕೆ ಪತ್ರ ನೀಡುವುದು.

- ಇಲಾಖೆಯು ಅನುಷ್ಠಾನಗೊಳಿಸುವ ವಿವಿಧ ಯೋಜನೆಗಳಿಗೆ ಅಗತ್ಯವಿದ್ದಲ್ಲಿ ಇಲಾಖೆ ತಿಳಿಸುವ ರೈತರಿಗೆ ಪ್ರತಿ ವರ್ಷ ನಿಗದಿಪಡಿಸಿರುವ ದರದಲ್ಲಿ ಜೇನು ಕುಟುಂಬಗಳನ್ನು ಮಾರಾಟ ಮಾಡುವ ಬಗ್ಗೆ ಒಡಂಬಡಿಕೆಯನ್ನು ಮಾಡಿಸಿಕೊಳ್ಳತಕ್ಕದ್ದು.
- ಸದರಿ ಉದ್ದೇಶಕ್ಕಾಗಿ ರೂ. 51.50 ಲಕ್ಷಗಳ ಅನುದಾನ ಗುರುತಿಸಿಕೊಳ್ಳಲಾಗಿದೆ.

## 7. ಪ್ರಚಾರ, ಸಾಹಿತ್ಯ, ಉತ್ತೇಜನ ಚಟುವಟಿಕೆಗಳು ಹಾಗೂ ಆಡಳಿತಾತ್ಮಕ ವೆಚ್ಚ.

**ಉದ್ದೇಶ:** ಜೇನು ಕೃಷಿಯ ಬೇಸಾಯದ ಬಗ್ಗೆ ಹಾಗೂ ಜೇನು ಕೃಷಿಯ ಪ್ರಾಮುಖ್ಯತೆ ಬಗ್ಗೆ ಹೆಚ್ಚಿನ ಪ್ರಚಾರ ನೀಡಲು ಅಗತ್ಯ ಪ್ರಚಾರ ಸಾಮಗ್ರಿಗಳನ್ನು ಮುದ್ರಿಸುವುದು, ಮಧುಮೇಳ ಹಾಗೂ ಮಧು ಮಹೋತ್ಸವಗಳನ್ನು ಏರ್ಪಡಿಸುವುದು, ಆಡಳಿತಾತ್ಮಕ ವೆಚ್ಚಗಳನ್ನು ಭರಿಸುವುದು.

ಸದರಿ ಉದ್ದೇಶಕ್ಕಾಗಿ ರೂ. 26.10 ಲಕ್ಷಗಳ ಅನುದಾನ ನಿಗದಿಪಡಿಸಲಾಗಿದೆ.

ಜೇನು ಕೃಷಿ ಯೋಜನೆ ಮತ್ತು ಜೇನು ಬೆಳೆಯ ವೈಶಿಷ್ಟ್ಯದ ಬಗ್ಗೆ ಪಠ್ಯವನ್ನು ಸಿದ್ದಪಡಿಸಿ ಅನುಮೋದನೆ ಪಡೆದು ಅವಶ್ಯಕತೆಯಿರುವ ಕರಪತ್ರಗಳ ಸಂಖ್ಯೆಯನ್ನು ನಿರ್ಧರಿಸಿಕೊಂಡು ಅವುಗಳನ್ನು ಮುದ್ರಿಸಲು ಸೂಕ್ತ ಪಾರದರ್ಶಕತೆಯ ನಿಯಮಾವಳಿಗಳಿಗೆ ಒಳಪಟ್ಟಂತೆ ಮುದ್ರಿಸುವುದು.

- ಇಂತಹ ಕರಪತ್ರಗಳನ್ನು ಪ್ರಮುಖ ಕಛೇರಿಗಳಲ್ಲಿ, ರೈತ ಸಂಪರ್ಕ ಕೇಂದ್ರಗಳಲ್ಲಿ, ಪ್ರಗತಿಪರ ಜೇನುಗಾರರ ಸಂಘಗಳು ಹಾಗೂ ಇಲಾಖಾ ಕಛೇರಿಗಳಲ್ಲಿ ಸಾಕಷ್ಟು ಸಂಖ್ಯೆಯಲ್ಲಿ ಲಭ್ಯಗೊಳಿಸುವುದು.
- ಇಂತಹ ಕರಪತ್ರಗಳನ್ನು, ಕಿರು ಹೊತ್ತಿಗೆ, Flex / Banners ಅಥವಾ ಇನ್ನಿತರೆ ಪ್ರಚಾರ ಸಾಮಗ್ರಿಗಳನ್ನು ಜಿಲ್ಲೆಯಲ್ಲಿ ಕೃಷಿ ಮತ್ತು ತೋಟಗಾರಿಕೆಗೆ ಸಂಬಂಧಪಟ್ಟಂತೆ ವಸ್ತು ಪ್ರದರ್ಶನ ಮತ್ತು ಕಾರ್ಯಗಾರಗಳಲ್ಲಿ ರೈತರಿಗೆ ಒದಗಿಸುವುದು.
- ಭಾವಿ ಮತ್ತು ಹಾಲಿ ಜೇನು ಕೃಷಿಕರಿಗೆ ಜೇನು ಕೃಷಿಯ ನೂತನ ಅವಿಷ್ಕಾರಗಳನ್ನು ವಿಚಾರ ವಿನಿಮಯಗಳ ಮೂಲಕ ಪರಿಚಯಿಸುವುದು ಹಾಗೂ ಜೇನು ಕೃಷಿಯ ಉಪಕರಣಗಳ ಮತ್ತು ಜೇನು ತುಪ್ಪದ ಮೌಲ್ಯಗಳನ್ನು ಪ್ರದರ್ಶನ ಹಾಗೂ ಮಾರಾಟಕ್ಕೆ ಮಧು ಮಹೋತ್ಸವ ಏರ್ಪಡಿಸುವ ಮೂಲಕ ವ್ಯವಸ್ಥೆಗೊಳಿಸುವುದು .
- ಸದರಿ ಘಟಕದಡಿ ಘಟಕವಾರು ಗರಿಷ್ಟ ರೂ.0.50 ಲಕ್ಷಗಳ ವೆಚ್ಚ ಭರಿಸಬಹುದಾಗಿರುತ್ತದೆ.
- ಜೇನು ಕೃಷಿಯ ಪ್ರಗತಿಪರ ರೈತರ ಸಂದರ್ಶನಗಳನ್ನು ಹಾಗೂ ಜೇನು ಉತ್ಪಾದಕತೆಯನ್ನು ಹಾಗೂ ರೈತ ಸಮೂಹದಲ್ಲಿ ಜೇನು ಬೆಳೆ ಅಭಿವೃದ್ಧಿಯ ಸ್ಥಿರತೆಯನ್ನು ಮೂಡಿಸಲು ಸಾಕ್ಷ್ಯಚಿತ್ರವನ್ನು ನಿರ್ದೇಶನಾಲಯದ ವತಿಯಿಂದ ತಯಾರಿಸಿ ಕೇಬಲ್ ಟಿವಿ/ದೂರದರ್ಶನ/ ಆಕಾಶವಾಣಿಗಳಲ್ಲಿ ಪ್ರಚಾರ ಮಾಡಬಹುದಾಗಿದೆ. ಇತರೆ ಸಂಬಂಧಿತ ಕಾರ್ಯಕ್ರಮಗಳನ್ನು ಮಾಡಬಹುದಾಗಿರುತ್ತದೆ.
- ಸಂಬಂಧಪಟ್ಟ ಸಂಸ್ಥೆ/ಜಾಹಿರಾತು ಏಜೆನ್ಸಿಗಳಿಗೆ ಕಡ್ಡಾಯವಾಗಿ ಇ.ಸಿ.ಎಸ್. ಮೂಲಕವೇ ಪಾವತಿಸತಕ್ಕದ್ದು.

## 8. ಭಾಗಮಂಡಲದ ಜೇನುಗಾರಿಕೆ ತರಬೇತಿ ಕೇಂದ್ರಗಳ ಅಭಿವೃದ್ಧಿಗೆ ಸಹಾಯ

**ಉದ್ದೇಶ:** ಭಾಗಮಂಡಲದ ಜೇನುಗಾರಿಕೆ ತರಬೇತಿ ಕೇಂದ್ರವನ್ನು ಅಭಿವೃದ್ಧಿ ಪಡಿಸುವ ಮೂಲಕ ಜೇನುಗಾರಿಕೆ ತರಬೇತಿ ಕಾರ್ಯಕ್ರಮಗಳಿಗೆ ಚಾಲನೆ ನೀಡುವುದು.

2013-14 ನೇ ಸಾಲಿನಲ್ಲಿ ಭಾಗಮಂಡಲದ ಜೇನುಗಾರಿಕೆ ತರಬೇತಿ ಕೇಂದ್ರದ ಕಟ್ಟಡವನ್ನು ಅಭಿವೃದ್ಧಿ ಪಡಿಸಲು ರೂ.50.00 ಲಕ್ಷಗಳ ಅನುದಾನ ನಿಗಧಿಪಡಿಸಲಾಗಿತ್ತು. ಪ್ರಸ್ತುತ ಸಾಲಿನಲ್ಲಿ ತರಬೇತಿ ಕೇಂದ್ರವನ್ನು ಅಭಿವೃದ್ಧಿಪಡಿಸಿದ ನಂತರ ಅಗತ್ಯ ಪೀಠೋಪಕರಣಗಳು/ ಮಧುವನದ ಮೂಲಭೂತ ಸೌಕರ್ಯಗಳನ್ನು ಅಭಿವೃದ್ಧಿ ಪಡಿಸಿಕೊಳ್ಳಲು ಒಟ್ಟು **ರೂ.20.00** ಲಕ್ಷಗಳ ಅನುದಾನ ನಿಗದಿಪಡಿಸಲಾಗಿದೆ. ಸದರಿ ಅನುದಾನದಲ್ಲಿ ಅಗತ್ಯ ಕಾರ್ಯಕ್ರಮಗಳನ್ನು ನಿಯಮಾನುಸಾರ ಟೆಂಡರ್ ಕರೆದು ಕೈಗೊಳ್ಳುವುದು. ಸದರಿ ಅನುದಾನದಲ್ಲಿ ರೂ. 5.00 ಲಕ್ಷಗಳನ್ನು ಭಾಗಮಂಡಲ ತರಬೇತಿ ಕೇಂದ್ರದ ಮಧುವನದ ಜಾಗದ ಸ್ವಚ್ಚತೆ, ಕಾಲು ದಾರಿಗಳ ನಿರ್ಮಾಣ ಇತ್ಯಾದಿ ಅಗತ್ಯ ಕಾರ್ಯಗಳಿಗೆ ಬಳಸಿಕೊಳ್ಳುವುದು.

**V.ಅನುದಾನ ಮತ್ತು ಸಹಾಯಧನ:**

- ರಾಜ್ಯ ಸರ್ಕಾರವು ಸದರಿ ಯೋಜನೆಯಡಿ 2014-15ನೇ ಸಾಲಿಗೆ ರೂ.200.00 ಲಕ್ಷಗಳ ಅನುದಾನವನ್ನು ಲಿಂಕ್ ಡಾಕ್ಯೂಮೆಂಟ್ ನಲ್ಲಿ ಗೊತ್ತು ಮಾಡಿದೆ. ಸದರಿ ಯೋಜನೆಯಡಿ ರಾಜ್ಯ ಸರ್ಕಾರದಿಂದ ಶೇಕಡ 100 ರಷ್ಟು ಅನುದಾನ ಬಿಡುಗಡೆ ಮಾಡಲಾಗುವುದು.
- ರಾಜ್ಯ ಸರ್ಕಾರದಿಂದ ಬಿಡುಗಡೆಯಾಗುವ ಅನುದಾನವನ್ನು ಜಿ.ಪಂ ಗಳಿಗೆ ಬಿಡುಗಡೆ ಮಾಡಲಾಗುವುದು. ಈರೀತಿ ಜಿಲ್ಲೆಗೆ ಬಿಡುಗಡೆಯಾದ ಅನುದಾನವನ್ನು ತಾಲ್ಲೂಕಿನ ಹಿರಿಯ ಸಹಾಯಕ ತೋಟಗಾರಿಕೆ ನಿರ್ದೇಶಕರು / ಸಹಾಯಕ ತೋಟಗಾರಿಕೆ ನಿರ್ದೇಶಕರು ತೋಟಗಾರಿಕೆ ಉಪನಿರ್ದೇಶಕರು (ಜಿ.ಪಂ) ರವರ ಮೇಲುಸಹಿಯೊಂದಿಗೆ ಫಲಾನುಭವಿಗೆ ECS ಮುಖಾಂತರ ನೇರವಾಗಿ ಬ್ಯಾಂಕ್ ಖಾತೆಗೆ ಜಮೆ ಮಾಡುವುದು. ಅನುದಾನವನ್ನು ಮಾರ್ಗಸೂಚಿ ಪ್ರಕಾರ ತೋಟಗಾರಿಕೆ ಉಪನಿರ್ದೇಶಕರು ಯೋಜನೆಯ ಅನುಷ್ಠಾನಕ್ಕೆ ಬಳಕೆ ಮಾಡುವುದು.
- ಈ ಯೋಜನೆಯಡಿ ಸಾಮಾನ್ಯ ರೈತರು ಶೇಕಡ 50ರಷ್ಟು ಹಾಗೂ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗದ ಫಲಾನುಭವಿಗಳು ಶೇಕಡ 90ರಷ್ಟು ಸಹಾಯ ಧನಕ್ಕೆ ಅರ್ಹರಿರುತ್ತಾರೆ.

## VI. ಫಲಾನುಭವಿಗಳ ಅರ್ಹತೆ:

1) ಫಲಾನುಭವಿಗಳು ರೈತರಾಗಿದ್ದು ಜಮೀನು ಅವರ ಹೆಸರಿನಲ್ಲಿರಬೇಕು. ಜಂಟಿ ಖಾತೆಯಾಗಿದ್ದಲ್ಲಿ ಇತರೆ ಖಾತೆದಾರರ ಒಪ್ಪಿಗೆ ಪತ್ರ ಪಡೆದಿರಬೇಕು. ತಂದೆ ಅಥವಾ ತಾಯಿ ಹೆಸರಿನಲ್ಲಿ ಜಮೀನಿದ್ದು, ಅವರು ಮರಣ ಹೊಂದಿದ್ದಲ್ಲಿ ಮಾತ್ರ ಗ್ರಾಮ ಲೆಕ್ಕಿಗರಿಂದ ದೃಡೀಕರಿಸಿ, ಕುಟಂಬದ ಇತರೆ ಸದಸ್ಯರಿಂದ ಒಪ್ಪಿಗೆ ಪಡೆದು ತಮ್ಮ ಹೆಸರಿನಲ್ಲಿ ಅರ್ಜಿ ಸಲ್ಲಿಸುವುದು.
2) ಮಹಿಳೆಯ ಹೆಸರಿನಲ್ಲಿ ಖಾತೆ ಹೊಂದಿದ್ದು, ಕುಟುಂಬದ ಇತರೆ ಪುರುಷ ಸದಸ್ಯರ ಹೆಸರಲ್ಲಿ ಅರ್ಜಿ ಸಲ್ಲಿಸಿದ್ದಲ್ಲಿ ಯಾವುದೇ ಕಾರಣಕ್ಕೂ ಮಾನ್ಯ ಮಾಡಬಾರದು. ಮಹಿಳೆಯರ ಹೆಸರಿನಲ್ಲಿಯೇ ಅರ್ಜಿ ಸಲ್ಲಿಸುವುದನ್ನು ಉತ್ತೇಜಿಸಬೇಕು.
3) ಫಲಾನುಭವಿಗಳು ತೋಟಗಾರಿಕೆ ಬೆಳೆಗಳನ್ನು ಬೆಳೆಯುವ ರೈತರಾಗಿರಬೇಕು ಅಥವಾ ತೋಟಗಾರಿಕೆ ಬೆಳೆ ಬೆಳೆಯುವ ಆಸಕ್ತಿ ಹೊಂದಿರಬೇಕು.
4) ಜಮೀನು ರಹಿತ ಗ್ರಾಮೀಣ ಪ್ರದೇಶದ ಹಾಗೂ ನಗರ / ಪಟ್ಟಣ ಪ್ರದೇಶದ ಫಲಾನುಭವಿಗಳು ವಿಳಾಸ ದೃಡೀಕರಣ ಪತ್ರ ನೀಡಿ ಸೌಲಭ್ಯ ಪಡೆಯತಕ್ಕದ್ದು.
5) ಸಾಮಾನ್ಯ ವರ್ಗದ ಫಲಾನುಭವಿಗಳು ಶೇ.50 ರಷ್ಟು ಸಹಾಯಧನ ಪಡೆಯಲು ಹಾಗೂ ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡದ ಫಲಾನುಭವಿಗಳು ಶೇ.90 ರಷ್ಟು ಸಹಾಯಧನ ಪಡೆಯಲು ಅರ್ಹರಾಗಿರುತ್ತಾರೆ.

ಪರಿಶಿಷ್ಟ ಜಾತಿ ವರ್ಗದವರಿಗೆ (SC) ಒಟ್ಟು ಅನುದಾನದ ಕನಿಷ್ಟ ಶೇ.17.15% ರಷ್ಟು ಮೀಸಲಿಡಬೇಕು. ಪರಿಶಿಷ್ಟ-ಪಂಗಡದವರಿಗೆ (ST) ಒಟ್ಟು ಅನುದಾನದ ಕನಿಷ್ಟ ಶೇ.6.95%ರಷ್ಟು ಮೀಸಲಿಡಬೇಕು. ಸಣ್ಣ, ಅತೀ ಸಣ್ಣ ರೈತರು ಮತ್ತು ರೈತ ಮಹಿಳೆಯರಿಗೆ ಕನಿಷ್ಟ ಶೇ.33%ರಷ್ಟು ಅನುದಾನ ಮೀಸಲಿಡಬೇಕು.

6) ಫಲಾನುಭವಿಯು ಅರ್ಜಿಯಲ್ಲಿ ಕೋರಿರುವ ಸಹಾಯಧನವನ್ನು ಘಟಕವಾರು ವಿವರಗಳನ್ನು ಕಡ್ಡಾಯವಾಗಿ ಮಾರ್ಗಸೂಚಿ ಯನ್ನು ನಿಗದಿ ಪಡಿಸಿದಂತೆ ಅಥವಾ ಅದಕ್ಕೆ ಅನುಗುಣವಾಗಿ ಲೆಕ್ಕ ಹಾಕಿ ಸಹಾಯ ಧನವನ್ನು ವಿತರಿಸುವುದು.

7) ಫಲಾನುಭವಿಯು ಸಂಬಂಧಿಸಿದ ಘಟಕಕ್ಕೆ ಸಹಾಯ ಧನವನ್ನು ಈ ಮೊದಲು ಜೇನುಕೃಷಿಯ ಯಾವುದೇ ಯೋಜನೆ / ಕಾರ್ಯಕ್ರಮಗಳಡಿ ಪಡೆದಿದ್ದಲ್ಲಿ ಮತ್ತೊಮ್ಮೆ ಸದರಿ ಯೋಜನೆಯಡಿ ಸಹಾಯ ಧನ ಪಡೆಯಲು ಅರ್ಹರಿರುವುದಿಲ್ಲ.

## VII. ಅರ್ಜಿ ಸಲ್ಲಿಸುವ ವಿಧಾನ, ಅರ್ಜಿ ಪರಿಶೀಲನೆ ಮತ್ತು ಫಲಾನುಭವಿಗಳ ಆಯ್ಕೆ:-

1) ಜಿಲ್ಲೆಯ ತೋಟಗಾರಿಕೆ ಉಪ ನಿರ್ದೇಶಕರು (ಜಿಪಂ) ರವರು ಯೋಜನೆಯ ಮಾರ್ಗಸೂಚಿ ಪ್ರಕಾರ ಅರ್ಹ ರೈತರಿಂದ ಅರ್ಜಿಗಳನ್ನು ಆಹ್ವಾನಿಸಲು ಜಿಲ್ಲೆಗೆ ನಿಗದಿ ಪಡಿಸಿರುವ ಗುರಿಯ ಮಿತಿಯಲ್ಲಿ ಪ್ರಕಟಣೆಯನ್ನು ಸ್ಥಳೀಯ ಪತ್ರಿಕೆಗಳ ಮುಖಾಂತರವಾಗಿ ಹಾಗೂ ಜಿಲ್ಲೆಯ ಎಲ್ಲಾ ಕಛೇರಿ ಸೂಚನಾ ಫಲಕದಲ್ಲಿ ಪ್ರದರ್ಶಿಸುವ ಮೂಲಕ ಹೆಚ್ಚಿನ ಪ್ರಚಾರ ನೀಡಿ ಅರ್ಹ ಫಲಾನುಭವಿಗಳಿಂದ ಅರ್ಜಿಗಳನ್ನು ಅಹ್ವಾನಿಸುವುದು.

2) ಅಧಿಸೂಚನೆಯಲ್ಲಿ ಕಡ್ಡಾಯವಾಗಿ ಫಲಾನುಭವಿಗಳ ಅರ್ಹತೆ, ಆಯ್ಕೆಯ ಮಾನದಂಡಗಳು, ಸಲ್ಲಿಸಬೇಕಾದ ದಾಖಲಾತಿಗಳು, ಅರ್ಜಿಯನ್ನು ಸಲ್ಲಿಸಲು ಕೊನೆಯ ದಿನಾಂಕ, ಜಿಲ್ಲೆಗೆ ನಿಗದಿಪಡಿಸಿದ ಗುರಿ ಮತ್ತು ನಿಗದಿಪಡಿಸಿದ ಗುರಿಗಿಂತ ಹೆಚ್ಚಿನ ಅರ್ಜಿಗಳು ಸ್ವೀಕರಿಸಿದಲ್ಲಿ ಅನುಸರಿಸುವ ವಿಧಾನದ ಬಗ್ಗೆ ಸ್ಪಷ್ಟವಾಗಿ ಮಾಹಿತಿ ಇರತಕ್ಕದ್ದು.

3) ಆಸಕ್ತಿಯುಳ್ಳ ರೈತರು ಅರ್ಜಿಯನ್ನು (ಅರ್ಜಿ ನಮೂನೆ **ಅನುಬಂಧ -1**ರಲ್ಲಿ ಒದಗಿಸಿದೆ). ಮೊದಲಿಗೆ ಈ ಕೆಳಕಂಡ ದಾಖಲಾತಿಗಳೊಂದಿಗೆ ತಾಲ್ಲೂಕು ಹಿಸತೋನಿ/ಸತೋನಿ ಕಛೇರಿಗೆ ಸಲ್ಲಿಸುವುದು.

   a. ನಿಗಧಿತ ನಮೂನೆಯಲ್ಲಿ ಫಲಾನುಭವಿಯ ಭಾವಚಿತ್ರ ಹಾಗೂ ಫಲಾನುಭವಿ ಭರ್ತಿ ಮಾಡಿ ಸಹಿ ಮಾಡಿದ ಅರ್ಜಿ (ದ್ವಿ ಪ್ರತಿಯಲ್ಲಿ) .
   b. ಪಹಣಿ (RTC) (ಉಪಕರಣ ಅಳವಡಿಸಿದ ಬೆಳೆ ಮತ್ತು ವಿಸ್ತೀರ್ಣ ನಮೂದಿಸಿರಬೇಕು).
   c. ಜಮೀನು ರಹಿತ ಜೇನು ಕೃಷಿ ಆಸಕ್ತ ಫಲಾನುಭವಿಗಳು ವಿಳಾಸ ದೃಢೀಕರಣ ನೀಡಬೇಕು.
   d. ರೈತರ ಬ್ಯಾಂಕ್ ಖಾತೆಯುಳ್ಳಪಾಸ್ ಪುಸ್ತಕದ ಜೆರಾಕ್ಸ್ ಪ್ರತಿ ನೀಡತಕ್ಕದ್ದು.

   ಈ ಎಲ್ಲಾ ದಾಖಲಾತಿಗಳನ್ನು ಇಲಾಖೆಯಲ್ಲಿ ಕಾರ್ಯ ನಿರ್ವಹಿಸುತ್ತಿರುವ ರೈತ ಸಂಪರ್ಕ ಕೇಂದ್ರದ ಅಧಿಕಾರಿಗಳು/ಜೇನುಕೃಷಿ ಸಿಬ್ಬಂದಿ / ಹೊರಗುತ್ತಿಗೆ ಆಧಾರದ ಮೇಲೆ ನೇಮಕಗೊಂಡ ಜೇನುಕೃಷಿ ಸಿಬ್ಬಂದಿಗಳು ಸಂಬಂಧಪಟ್ಟ ತಾಲ್ಲೂಕಿನ ಹಿ.ಸ.ತೋ.ನಿ. /ಸ.ತೋ.ನಿ. ರವರಿಗೆ ಸಲ್ಲಿಸತಕ್ಕದ್ದು.

- ಇಲಾಖೆಯಲ್ಲಿ ಕಾರ್ಯ ನಿರ್ವಹಿಸುತ್ತಿರುವ ರೈತ ಸಂಪರ್ಕ ಕೇಂದ್ರದ ಅಧಿಕಾರಿಗಳು /ಜೇನುಕೃಷಿ ಸಿಬ್ಬಂದಿ / ಹೊರಗುತ್ತಿಗೆ ಆಧಾರದ ಮೇಲೆ ನೇಮಕಗೊಂಡ ಜೇನುಕೃಷಿ ಸಿಬ್ಬಂದಿಗಳು ಫಲಾನುಭವಿಗಳೊಂದಿಗೆ ತಾಕುಗಳನ್ನು ಪರಿಶೀಲಿಸಿ ಅಗತ್ಯವಾದ ಜೇನುಪೆಟ್ಟಿಗೆ / ಕುಟುಂಬಗಳ ಬಗ್ಗೆ / ಮಧುವನ ನಿರ್ಮಾಣದ ಬಗ್ಗೆ

ಸೂಕ್ತ ಶಿಫಾರಸ್ಸು ಮಾಡಿ ಅನುಷ್ಟಾನದ ವಿವರ ಹಾಗೂ ಫಲಾನುಭವಿಗಳ ಸಮೇತ ಫೋಟೊ ತೆಗೆದು, ಫೋಟೊ ಹಾಗೂ ವರದಿಯನ್ನು ಹಿಸತೋನಿ ದೃಢೀಕರಣದೊಂದಿಗೆ ತೋಟಗಾರಿಕೆ ಉಪ ನಿರ್ದೇಶಕರು (ಜಿಪಂ) ರವರಿಗೆ ಸಲ್ಲಿಸುವುದು ( 5 ದಿನಗಳೊಳಗಾಗಿ).

- ರೈತರು ಸಲ್ಲಿಸುವ ಪ್ರತಿಯೊಂದು ಸಹಾಯಧನ ಅರ್ಜಿ ಮತ್ತು ದಾಖಲಾತಿಗಳನ್ನು ನಿಗದಿತ ದಿನಾಂಕದೊಂದಿಗೆ ಕಡ್ಡಾಯವಾಗಿ ವ್ಯಾಟ್ ಸಂಖ್ಯೆ / ಮಾರಾಟ ತೆರಿಗೆ ಸಂಖ್ಯೆ ನಮೂದಿಸಿರುವ ಬಿಲ್‌ನೊಂದಿಗೆ ಸಲ್ಲಿಸುವುದು.
- ಪ್ರತಿ ಅರ್ಜಿಯನ್ನುಕಾರ್ಯ ನಿರ್ವಹಿಸುತ್ತಿರುವ ರೈತ ಸಂಪರ್ಕ ಕೇಂದ್ರದ ಅಧಿಕಾರಿಗಳು/ ಜೇನುಕೃಷಿ ಸಿಬ್ಬಂದಿ / ಹೊರಗುತ್ತಿಗೆ ಆಧಾರದ ಮೇಲೆ ನೇಮಕಗೊಂಡ ಜೇನುಕೃಷಿ ಸಿಬ್ಬಂದಿಗಳು ಕಡ್ಡಾಯವಾಗಿ (ಶೇ.100 ರಷ್ಟು) ತಾಕು ಪರಿಶೀಲನೆ ನಡೆಸಬೇಕು.
- ಈ ರೀತಿ ಪರಿಶೀಲಿಸಿದ ತಾಕುಗಳ ಪೈಕಿ ಕನಿಷ್ಟ ಶೇ.75 ರಷ್ಟು ತಾಕುಗಳನ್ನು ತಾಲ್ಲೂಕು ಸತೋನಿ/ಹಿಸತೋನಿ ರವರು ಪರಿಶೀಲಿಸಬೇಕು. ಜೇನುಕೃಷಿ ಸಿಬ್ಬಂದಿಗಳು ನಡೆಸಿರುವ ಪರಿಶೀಲನೆಯಲ್ಲಿ ಯಾವುದಾದರು ನ್ಯೂನ್ಯತೆಗಳಿದ್ದರೆ ಅರ್ಜಿಯನ್ನು ತಿರಸ್ಕರಿಸುವುದಲ್ಲದೇ ಅವರನ್ನೇ ನೇರ ಜವಾಬ್ದಾರರನ್ನಾಗಿ ಮಾಡುವುದು.
- ಜಿಲ್ಲೆಯ ತೋಉನಿ (ಜಿಪಂ) ರವರು ಶೇ.15 ರಷ್ಟು ತಾಕುಗಳ ಪರಿಶೀಲನೆ ಕಡ್ಡಾಯವಾಗಿ ಮಾಡುವುದು. ಸತೋನಿ/ಹಿಸತೋನಿ ರವರು ಪರಿಶೀಲಿಸಿರುವ ಅರ್ಜಿಗಳಲ್ಲಿ ಯಾವುದಾದರು ನ್ಯೂನ್ಯತೆಗಳಿದ್ದರೆ ಸತೋನಿ/ಹಿಸತೋನಿ ರವರನ್ನು ಜವಾಬ್ದಾರರನ್ನಾಗಿ ಮಾಡಿ ನಿರ್ದೇಶನಾಲಯಕ್ಕೆ ವರದಿ ಸಲ್ಲಿಸುವುದು.
- ರೈತರು ಬೆಳೆಯನ್ನು ಪಹಣಿಯಲ್ಲಿ ನಮೂದಿಸದೆ ಇರುವ ಪಕ್ಷದಲ್ಲಿ ಇಲಾಖೆಯಲ್ಲಿ ಕಾರ್ಯ ನಿರ್ವಹಿಸುತ್ತಿರುವ ರೈತ ಸಂಪರ್ಕ ಕೇಂದ್ರದ ಅಧಿಕಾರಿಗಳು/ ಜೇನುಕೃಷಿ ಸಿಬ್ಬಂದಿ / ಹೊರಗುತ್ತಿಗೆ ಆಧಾರದ ಮೇಲೆ ನೇಮಕಗೊಂಡ ಜೇನುಕೃಷಿ ಸಿಬ್ಬಂದಿಯಿಂದ ಬೆಳೆಯನ್ನು ಧೃಢೀಕರಿಸಿದ ಅರ್ಜಿಗಳನ್ನು ಸಹಾಯಧನ ಲೆಕ್ಕಾಚಾರ ಮಾಡಲು ಪರಿಗಣಿಸುವುದು.

**VIII. ತಾಂತ್ರಿಕ ಪರಿಶೀಲನಾ ಕ್ರಮಗಳು:-**

ತಾಕು ಪರಿಶೀಲನೆ ಸಮಯದಲ್ಲಿ ಅನುಷ್ಠನಾಧಿಕಾರಿಗಳು ಈ ಕೆಳಕಂಡ ಅಂಶಗಳನ್ನು ಕಡ್ಡಾಯವಾಗಿ ಪರಿಶೀಲಿಸತಕ್ಕದ್ದು.

1. ಜೇನುಕೃಷಿ ಸಿಬ್ಬಂದಿಯು ಫಲಾನುಭವಿಗಳು ಜೇನುಕುಟುಂಬಗಳನ್ನಿಡಲು ಆಯ್ಕೆ ಮಾಡಿಕೊಂಡಿರುವ ಸ್ಥಳಗಳ 2 ಕಿ.ಮಿ. ವ್ಯಾಪ್ತಿಯಲ್ಲಿ ಜೇನುಕೃಷಿಗೆ ಅನುಗುಣವಾದ ಪರಾಗ ಮತ್ತು ಪುಷ್ಪರಸ ಯಥೇಚ್ಛವಾಗಿ ಲಭ್ಯವಿರುವುದನ್ನು ಖಾತ್ರಿ ಪಡಿಸಿಕೊಳ್ಳುವುದು.
2. ಜೇನು ಕುಟುಂಬಗಳಿಗೆ ಸಮೀಪದಲ್ಲಿ ಶತ್ರುಗಳ ಕಾಟ ಇಲ್ಲದೇ ಇರುವುದನ್ನು ದೃಢೀಕರಿಸಿಕೊಂಡು ಅಗತ್ಯ ನಿವಾರಣಾ ಕ್ರಮಗಳ ಬಗ್ಗೆ ಸೂಕ್ತ ಮಾಹಿತಿಯನ್ನು ನೀಡುವುದು.
3. ಫಲಾನುಭವಿಯು ISI-A ಮಾದರಿಯ ಕಾಡುಮರದಿಂದ ಮಾಡಿದ ಹಾಗೂ ತೇಗ/ಹೊನ್ನೆಮತ್ತಿ ಮರದ 8 ಚೌಕಟ್ಟುಗಳುಳ್ಳ ಜೇನುಸಂಸಾರ ಕೋಣೆ ಮತ್ತು ಜೇನುಕೋಣೆಯುಳ್ಳ ಜೇನುಪೆಟ್ಟಿಗೆಗಳನ್ನು ಮಾತ್ರ ಖರೀದಿಸಿರುವ ಬಗ್ಗೆ ಹಾಗೂ ಪ್ರತಿ ಜೇನು ಕುಟುಂಬದಲ್ಲಿ ಸುಮಾರು 4 ಪ್ರೇಂಗಳಷ್ಟು ಕೆಲಸಗಾರ ಜೇನುದುಂಬಿಗಳು ಹಾಗೂ ಒಂದು ಪರಿಪಕ್ವವಾದ ರಾಣಿ ಜೇನುದುಂಬಿ ಕಡ್ಡಾಯವಾಗಿ ಇರುವ ಬಗ್ಗೆ ಖಾತ್ರಿ ಪಡಿಸಿಕೊಳ್ಳುವುದು.

4. ಜೇನು ಕುಟುಂಬಕ್ಕೆ ಅಗತ್ಯವಾದ ನೀರು / ನೆರಳು / ಅವಶ್ಯಕತೆಗಳು ಎಲ್ಲಾ ಕಾಲದಲ್ಲೂ ಸಿಗುವಂತೆ ಇರುವ ಬಗ್ಗೆ ಖಾತ್ರಿ ಪಡಿಸಿಕೊಳ್ಳುವುದು.
5. ಪ್ರತಿ ತಾಕುಗಳಿಗೆ ಕನಿಷ್ಟ 15 ದಿನಗಳಿಗೊಮ್ಮೆ ಕಾರ್ಯ ನಿರ್ವಹಿಸುತ್ತಿರುವ ಜೇನುಕೃಷಿ ಸಿಬ್ಬಂದಿ / ಹೊರ ಗುತ್ತಿಗೆ ಆಧಾರದ ಮೇಲೆ ನೇಮಕಗೊಂಡ ಜೇನುಕೃಷಿ ಸಿಬ್ಬಂದಿ ತಪ್ಪದೇ ಭೇಟಿ ನೀಡಿ ಅಗತ್ಯ ತಾಂತ್ರಿಕ ಮಾಹಿತಿಗಳನ್ನು ನೀಡುವುದು ಹಾಗೂ ಈ ಬಗ್ಗೆ ತಪ್ಪದೇ ತಮ್ಮ ದಿನಚರಿಯಲ್ಲಿ ನಮೂದಿಸುವುದು.

ಉಪ ನಿರ್ದೇಶಕರು ಮೇಲ್ಕಂಡ ದಾಖಲಾತಿಗಳನ್ನು ಪರಿಶೀಲಿಸಿ ನಿರ್ದೇಶನಾಲಯದ ಅನುಮೋದನೆ ಅವಶ್ಯಕತೆ ಇಲ್ಲದಿದ್ದಲ್ಲಿ ತಮ್ಮ ಹಂತದಲ್ಲಿ ಕಡ್ಡಾಯವಾಗಿ 10 ದಿನದ ಒಳಗೆ ಅನುಮೋದನೆ ನೀಡತಕ್ಕದ್ದು.

## iX. ನಿರ್ದೇಶನಾಲಯದ ಅನುಮೋದನೆ:

- ನಿರ್ದೇಶನಾಲಯದ ಅನುಮೋದನೆ ಅವಶ್ಯವಿದ್ದಲ್ಲಿ ಅಗತ್ಯ ದಾಖಲಾತಿಗಳನ್ನು ಕಡ್ಡಾಯವಾಗಿ ಪರಿಶೀಲಿಸಿ ಅರ್ಹತೆ ಇದ್ದಲ್ಲಿ ಮಾತ್ರ ಪ್ರತಿಯೊಂದು ದಾಖಲಾತಿಗಳನ್ನು ದೃಡೀಕರಿಸಿ ನಿರ್ದೇಶನಾಲಯಕ್ಕೆ ಸಲ್ಲಿಸುವುದು.
- ಯಾವುದಾದರು ಜಿಲ್ಲೆಗಳಿಂದ ಅರ್ಹತೆ ಹೊಂದಿಲ್ಲದ, ನಿಗದಿಪಡಿಸಿದ ಸಮಯದ ನಂತರ ವಿಳಂಬವಾಗಿ ಅಥವಾ ಅಪೂರ್ಣವಾದ ಪ್ರಸ್ತಾವನೆಗಳನ್ನು ಸಲ್ಲಿಸಿದಲ್ಲಿ ಸಂಬಂಧಪಟ್ಟ ತೋಟಗಾರಿಕೆ ಉಪ ನಿರ್ದೇಶಕರು ಮತ್ತು ಸಂಬಂಧಪಟ್ಟ ಕೇಂದ್ರ ಕಛೇರಿ ಸಹಾಯಕರ ವಿರುದ್ಧ ಶಿಸ್ತು ಕ್ರಮ ತೆಗೆದುಕೊಳ್ಳಲಾಗುವುದು.

## X.ಸಹಾಯಧನ ವಿತರಣೆ:

ಜಿಲ್ಲೆಯ ತೋಉನಿ(ಜಿಪಂ) ರವರು ಎಲ್ಲಾ ದಾಖಲೆಗಳನ್ನು ಹಾಗೂ ಹಿಸತೋನಿ ನೀಡಿರುವ ಅನುಷ್ಠಾನದ ವರದಿಯನ್ನು ಪರಿಶೀಲಿಸಿದ ನಂತರ ಕೆಲಸವು ತೃಪ್ತಿಕರವಾಗಿದಲ್ಲಿ ಮಾತ್ರ ಸಹಾಯಧನ ಮೊತ್ತವನ್ನು ಈ ಕೆಳಕಂಡ ಯಾವುದಾದರು ಒಂದು ವಿಧಾನದಲ್ಲಿ ಬಿಡುಗಡೆ ಮಾಡುವುದು.

1) ಘಟಕದ ಅಳವಡಿಕೆಯ ಪೂರ್ಣ ವೆಚ್ಚವನ್ನು ರೈತ ಫಲಾನುಭವಿಯು ಭರಿಸಿದ್ದಲ್ಲಿ ಸಹಾಯಧನ ಮೊತ್ತವನ್ನು ಫಲಾನುಭವಿಯ ಖಾತೆಗೆ ECS ಮೂಖಾಂತರ ಅಥವಾ ECS ಸೌಲಭ್ಯವಿಲ್ಲದಿದ್ದಲ್ಲಿ ಅಂತಹ ಬ್ಯಾಂಕ್‌ನ ಮ್ಯಾನೇಜರ್ ಹೆಸರಿಗೆ ಚೆಕ್‌ಅನ್ನು ನೀಡಿ ಫಲಾನುಭವಿ ಖಾತೆಗೆ ಜಮಾ ಮಾಡುವುದು.
2) ಫಲಾನುಭವಿಯು ಯಾವುದಾದರು ಬ್ಯಾಂಕ್‌ನಿಂದ ಸಾಲ ಪಡೆದಿದಲ್ಲಿ ಸಹಾಯಧನ ಮೊತ್ತವನ್ನು ಸಂಬಂಧಿಸಿದ ಸಾಲದ ಖಾತೆಗೆ ಜಮಾ ಮಾಡುವುದು.

## XI.ಅನುಷ್ಠಾನ ವೇಳಾ ಪಟ್ಟಿ:

1) ಯೋಜನೆಗೆ ನಿಗದಿಪಡಿಸಿದ ಅನುಷ್ಠಾನದ ವೇಳಾಪಟ್ಟಿಯಂತೆ ಮತ್ತು MPIC ಅನುಸಾರ ಅನುಷ್ಠಾನಗೊಳಿಸತಕ್ಕದ್ದು.
2) ಫಲಾನುಭವಿ ತಮ್ಮ ಕ್ಷೇತ್ರದಲ್ಲಿ ಯೋಜನೆಯನ್ನು ಅನುಷ್ಠಾನಗೊಳಿಸಿದ 30 ದಿನಗಳ ಒಳಗಾಗಿ ಸಹಾಯಧನವನ್ನು ಫಲಾನುಭವಿಖಾತೆ / ಸಾಲದಖಾತೆಗೆ ಜಮಾ ಮಾಡತಕ್ಕದ್ದು. ಈ ಬಗ್ಗೆ ಸಂಬಂಧಿಸಿದ ಹಿಸತೋನಿ ಹಾಗೂ ತೋಉನಿ (ಜಿಪಂ) ರವರು ವೈಯುಕ್ತಿಕವಾಗಿ ಜವಾಬ್ದಾರರಾಗಿರುತ್ತಾರೆ.

3) ಜುಲೈ 2014ನೇ ಮಾಹೆಯ ಒಳಗಾಗಿ ಹೊರಗುತ್ತಿಗೆ ಆಧಾರದಲ್ಲಿ ಸಿಬ್ಬಂದಿಯನ್ನು ನೇಮಕಗೊಳಿಸುವ ಕಾರ್ಯ ಮುಕ್ತಾಯವಾಗಿರಬೇಕು.

4) ಸೆಪ್ಟೆಂಬರ್, 2014 ರ ಮಾಹೆಯ ಒಳಗಾಗಿ ಅಗತ್ಯವಾದ ಜೇನುಪೆಟ್ಟಿಗೆ ಹಾಗೂ ಜೇನು ಉಪಕರಣಗಳನ್ನು ಖರೀದಿಸತಕ್ಕದ್ದು.

5) ಅಕ್ಟೋಬರ್ 2014ರ ಮಾಹೆಯಲ್ಲಿ ಎಲ್ಲಾ ಜೇನು ಪೆಟ್ಟಿಗೆಗಳಿಗೆ ಜೇನುಕುಟುಂಬಗಳನ್ನು ಸೇರಿಸತಕ್ಕದ್ದು ಮತ್ತು ಮಧುವನಗಳ ಅಭಿವೃದ್ಧಿ ಕಾರ್ಯ ಪೂರ್ಣಗೊಳಿಸುವುದು.

6) ಎಲ್ಲಾ ತರಬೇತಿಗಳನ್ನು ನವೆಂಬರ್ 2014ನೇ ಮಾಹೆಯ ಒಳಗೆ ಪೂರ್ಣಗೊಳಿಸತಕ್ಕದ್ದು.

7) ಜನವರಿ ಮತ್ತು ಫೆಬ್ರವರಿ 2015 ನೇ ಮಾಹೆಯಲ್ಲಿ ಮಧುಮೇಳ / ಮಧು ಮಹೋತ್ಸವ ಆಯೋಜಿಸುವುದು, ಸಹಾಯ ಧನ ನೀಡುವ ಕಾರ್ಯಕ್ರಮಗಳನ್ನು ಪೂರ್ಣಗೊಳಿಸತಕ್ಕದ್ದು.

8) ಮಾರ್ಚ್ 2015ರ 2 ನೇ ವಾರದೊಳಗಾಗಿ ನೀಡಲಾಗಿರುವ ಗುರಿಯನ್ನು ಪೂರ್ಣವಾಗಿ ಸಾಧಿಸತಕ್ಕದ್ದು.

**XII.ಅನುಬಂಧಗಳು:**

1) ಅರ್ಜಿ ನಮೂನೆ -1

2) ಗುತ್ತಿಗೆ ಆಧಾರದ ಮೇಲೆ ಜಿಲ್ಲಾವಾರು ಪಡೆಯುವ ಸಿಬ್ಬಂದಿ ವಿವರ

3) ಜೇನು ಪೆಟ್ಟಿಗೆಗಳ ಯೋಜನೆವಾರು ಕೋಡಿಫಿಕೇಷನ್ ವಿವರ

4) ಮಧುವನಗಳ ನಿರ್ಮಾಣಕ್ಕೆ ನಿಗಧಿ ಪಡಿಸಿದ ವೆಚ್ಚದ ವಿವರ

**XIII. ಆರ್ಥಿಕ ಪ್ರತ್ಯಾಯೋಜನೆ ( Delegation of Power) :**

ಈ ಯೋಜನೆಯು ರಾಜ್ಯವಲಯ ಯೋಜನೆಯಾಗಿರುತ್ತದೆ ಈ ಯೋಜನೆಯ ಅನುದಾನವನ್ನು ಲೆಕ್ಕ ಶೀರ್ಷಿಕೆ: 2851-00-200-0-01 ಅಡಿ ಬಿಡುಗಡೆಯಾದ ಅನುದಾನವನ್ನು ನಿಯಮಾನುಸಾರ ಸಾದಿಲ್ವಾರು ಬಿಲ್ಲು ಮತ್ತು ಮಂಜೂರಾತಿಗಳೊಂದಿಗೆ ಖಜಾನೆ ಮೂಲಕ ಡ್ರಾ ಮಾಡಿಕೊಳ್ಳುವುದು. ಮಂಜೂರಾತಿ ನೀಡಲು ಸರ್ಕಾರದ ಆದೇಶ ಸಂಖ್ಯೆ: ಎಫ್.ಡಿ -2 ಟಿಎಫ್‌ಪಿ 2010. ದಿನಾಂಕ 30.04.2010ರ ಕ್ರಮ ಸಂಖ್ಯೆ 11ರ ಅನ್ವಯ ಪ್ರದತ್ತವಾದ ಆರ್ಥಿಕ ಪ್ರತ್ಯಾಧಿಕಾರವನ್ನು ಅನುಸರಿಸುವುದು ಹಾಗೂ ಮಾರ್ಗ ಸೂಚಿಯಂತೆ ಮಂಜೂರು ಮಾಡಲು ತೋಉನಿ (ಜಿ.ಪಂ) ರವರು ಸಕ್ಷಮ ಪ್ರಾಧಿಕಾರಿಯಾಗಿರುತ್ತಾರೆ.

**VIX. Reporting and documentation (ವರದಿ ಮಾಡುವುದು ಮತ್ತು ದಾಖಲೆಗಳನ್ನು ನಿರ್ವಹಿಸುವುದು).**

1. ಪ್ರತಿ ಮಾಹೆಯ ಪ್ರಗತಿ ವರದಿಯನ್ನು ಇ-ಮೇಲ್ ಮೂಲಕ ತಿಂಗಳ 3ನೇ ದಿನಾಂಕದ ಒಳಗಾಗಿ ತಪ್ಪದೇ ಸಲ್ಲಿಸುವುದು. (ಸಮಸ್ಯೆ ಇದ್ದಲ್ಲಿ ನಿರ್ದೇಶನಾಲಯದ ಜೇನುಕೃಷಿ ವಿಭಾಗವನ್ನು ಸಂಪರ್ಕಿಸುವುದು).
2. ಅಂತಿಮ ಪ್ರಗತಿ ವರದಿ, ಯಶೋಗಾಥೆಗಳು ಮತ್ತು ಯೋಜನೆಯ ಅನುಷ್ಠಾನದಿಂದ ಆಗುವ ಪ್ರಯೋಜನಗಳನ್ನು (ಲಿಖಿತ, ದೃಶ್ಯ ಮತ್ತು ಶ್ರವಣ) ಸಾಫ್ಟ್ ಕಾಪಿ ಮತ್ತು ಹಾರ್ಡ್ ಕಾಪಿಯೊಂದಿಗೆ ನಿರ್ದೇಶನಾಲಯದ ಜೇನುಕೃಷಿ ವಿಭಾಗಕ್ಕೆ ಸಲ್ಲಿಸುವುದು.